೨೯೦. ಘಾಯದ ದೆಶೆಯಿಂದ ಉಂಟಾಗುವ ಸಂದುವಾತದಲ್ಲಿ ಬೀಗು ಹೆಚ್ಚಾಗಿ ಕೀವು ಉಂಟಾಗಿದ್ದರೆ, ಬೇರೆ ವಿಶೇಷ ಉತ್ತೇಜಕ ಔಷಧವೇನೂ ಶಿಕ್ಕದ ಪಕ್ಷದಲ್ಲಿ ಉಮ್ಮತ್ತದ ಚಿಕಿತ್ಸೆಯನ್ನು ಮಾಡಿ ನೋಡ ಬಹುದು. ಉಮ್ಮತ್ತದ ಎಲೆಗಳನ್ನು ತಂದು ಒತ್ತಡ ಮಾಡಿ (೬, ೧೩೭[1]), ಆ ಘಾಯಕ್ಕೆ ದಿನಕ್ಕೆ ೩-೪ ಸಾರಿ ಹಚ್ಚುವದು. ಇದರಿಂದ ಕೀವು ಹೊರ ಬರುವದು. ಅದನ್ನು ನೀರಿನಿಂದ ಆಗ್ಯಾಗ್ಗೆ "ಕೃಶಿ" ಎಂಬ ಕ್ರಮದ ಮೇರೆಗೆ (೬೭[2]) ತೊಳಿಯುವದು. ಅದಲ್ಲದೆ ಉಮ್ಮತ್ತದ ಧೃತಿಯು (೧೩೩[3]) ಶುಮಾರು ೨೦-೩೦ ತಟಕುಗಳನ್ನು ನೀರಿನಲ್ಲಿ ಹಾಕಿ, ದಿನಕ್ಕೆ ೩-೪ ಸಾರಿ ಕೊಡುವದು. ಆದರೆ ಇದರ ಪರಿಮಾಣವನ್ನು ಗುಣಕ್ಕನುಸಾರವಾಗಿ ಕ್ರಮ ಪಡಿಸ ತಕ್ಕದ್ದು. ಬುದ್ಧಿಭ್ರಮಣೆಯಾಗಲೀ ತೂಗಡಿಕೆಯಾಗಲೀ ಉಂಟಾಗುವ ಪಕ್ಷಕ್ಕೆ, ಆ ಮದ್ದನ್ನು ನಿಲ್ಲಿಸಿ ಬಿಡ ತಕ್ಕದ್ದು. ಆದರೆ ಬಾಯಿಹಿಡಿತವು ಸ್ವಲ್ಪ ಗುಣವಾದಾಗ್ಯೂ, ಆಗ್ಯಾಗ್ಗೆ ಪುನಹಾ ತೋರಿ ದೀರ್ಘಕಾಲದ ವರೆಗೆ ಇರುವ ಪಕ್ಷದಲ್ಲಿ, ಔಷಧವನ್ನು ಇನ್ನೂ ಸಣ್ಣ ಪರಿಮಾಣದಲ್ಲಿ ದೂರ ದೂರ ಅಂತರವಾಗಿ ಪೂರ್ಣ ಗುಣ ಕಾಣುವ ವರೆಗೆ ಕೊಡ ಬಹುದು. ಈ ಔಷಧವನ್ನು ಕೆಲವು ಸಾರಿ ಕೊಡುವಷ್ಟರೊಳಗೆ ಕಿಂಚಿತ್ತಾದರೂ ಗುಣ ತೋರದ ಪಕ್ಷಕ್ಕೆ, ಈ ಔಷಧವನ್ನು ಕೊಟ್ಟು ಏನೂ ಪ್ರಯೋಜನ ವಿಲ್ಲಾ. ಮೇಲಿನ ಚಿಕಿತ್ಸೆ ಅಲ್ಲದೆ ಉಮ್ಮತ್ತದ ತೈಲವನ್ನು (೧೩೭[4]) ಸಹ ದಿನಕ್ಕೆ ಕೆಲವು ಸಾರಿ ಬೆನ್ನೆಲುಬಿಗೆ ಹಚ್ಚಿ ತಿಕ್ಕುವದು. ರೋಗಿಯನ್ನು ಕತ್ತಲಾಗಿರುವ ಕೋಣೆಯಲ್ಲಿ ಮಲಗಿಸಿ, ಶೀತಘಾಳಿ ಸ್ಪರ್ಶವಾಗದ ಹಾಗೆ ಇರಿಸ ಬೇಕು. ಮತ್ತು ಅವಶ್ಯವಿದ್ದರೆ, ಕರ್ಪೂರ ತೈಲದ ಪಿಚಕಾರಿಯಿಂದ (೬೩[5]) ಮಲಶೋಧನೆ ಮಾಡಿಸುವದು. ಅದಲ್ಲದೆ ರೋಗಿಗೆ ಮಾಂಸದ ಸಾರು (a^0), ಮೊಟ್ಟೆ ಹಾಕಿದ ಹಾಲು, ಬ್ರಾಂಡಿ ಮಿಶ್ರ (f^0) ಮುಂತಾದ ಪುಷ್ಟಿಕರ ಆಹಾರವನ್ನು ಕೊಡುವದು. ಇವುಗಳನ್ನು ನುಂಗಲಿಕ್ಕೆ ಕೂಡದೆ ಇರುವ ಪಕ್ಷಕ್ಕೆ, ಪಿಚಕಾರಿಯ ಮೂಲಕವಾಗಿ ಆದರೂ ಕೊಡ ಬಹುದು. ಆದರೆ ಒಂದೊಂದು ಸಾರಿ ನಾಲ್ಕು ಔನ್ಸಿಗಿಂತ ಹೆಚ್ಚು ಪ್ರಯೋಗಿಸ ಬಾರದು, ಪ್ರಯೋಗಿಸಿದ್ದಾದರೆ, ವಾಂತಿಯಾಗಲೀ ಝಾಡೆಯಾಗಲೀ ಆಗುವದು.

1) ೬ನೇ ಅಂಕೆಯನ್ನು ೧೮೮೬ನೇ ಇಸವಿಯ ಪಂಚಾಂಗದ ೫೫ನೇ ಪಾನಿನಲ್ಲಿಯೂ, ೧೩೭ನೇ ಅಂಕೆಯನ್ನು ೧೮೮೧ನೇ ಇಸವಿಯ ಪಂಚಾಂಗದ ೪೪-೪೯ನೇ ಪಾನುಗಳಲ್ಲಿಯೂ ನೋಡು.

2) ೧೮೮೬ನೇ ಇಸವಿಯ ಪಂಚಾಂಗದ ೪೯-೫೦ನೇ ಪಾನುಗಳಲ್ಲಿ ನೋಡು.

3) ೧೮೮೩ನೇ ಇಸವಿಯ ಪಂಚಾಂಗದ ೫೪-೫೫ನೇ ಪಾನುಗಳಲ್ಲಿ ನೋಡು.

4) ೧೮೮೧ನೇ ಇಸವಿಯ ಪಂಚಾಂಗದ ೪೮-೪೯ನೇ ಪಾನುಗಳಲ್ಲಿ ನೋಡು.

5) ೧೮೭೭ನೇ ಇಸವಿಯ ಪಂಚಾಂಗದ ೫೫ನೇ ಪಾನಿನಲ್ಲಿ ನೋಡು.

6) ೧೮೭೭ನೇ ಇಸವಿಯ ಪಂಚಾಂಗದ ೧೬-೧೭ನೇ ಪಾನುಗಳಲ್ಲಿ ನೋಡು.

ಸರ್ಪ ಕಚ್ಚಿದ್ದಕ್ಕೆ Snakebite.

ಸರ್ಪ ಕಚ್ಚಿದ ಕೂಡಲೇ ಆ ಕಚ್ಚಿದ ಭಾಗಕ್ಕೆ ಎರಡು ಯಾ ಮೂರು ಇಂಚು ಮೇಲೆ ವಸ್ತ್ರದ ಪಟ್ಟಿಯಿಂದ ಬಿಮ್ಮಗೆ ಕಟ್ಟ ಬೇಕು; ಮತ್ತು ಆ ಪಟ್ಟಿಗೂ ಅಂಗಕ್ಕೂ ನಡುವೆ ಒಂದು ಕೋಲನ್ನು ತೂರಿ, ಅದನ್ನು ಉರುಳಿಸಿ, ಆಗುವಷ್ಟು ಇನ್ನೂ ಬಿಗಿ ಮಾಡ ಬೇಕು (ಬಿರಿಕಾಯಿಸ ಬೇಕು). ಆ ಕಟ್ಟನ್ನು ಬಿಟ್ಟು ನಾಲ್ಕು ಯಾ ಆರು ಇಂಚ ಮೇಲಕ್ಕೆ ಇನ್ನು ಒಂದೆರಡು ಕಟ್ಟುಗಳನ್ನು ಹಾಕಿ, ಅದೇ ಪ್ರಕಾರ ಬಿರಿಕಾಯಿಸ ಬೇಕ ಅನಂತರ ಆ ಘಾಯವನ್ನು ಚೂರಿಯಿಂದಾಗಲೀ ಬೇರೆ ಶಸ್ತ್ರದಿಂದಾಗಲೀ ಗೀರಿ ಮೂರು ಕಾಲು ಇಂಚಿನಷ್ಟಕ್ಕೆ ಆ ಘಾಯವನ್ನು ಕಂತ ಮಾಡಿ, ಅದರಿಂದ ಸಂಗವಾಗಿ ನೆತ್ತರ ಹರಿಯುವಂತೆ ಮಾಡ ಬೇಕು. ಬಳಿಕ ಕೂಡುವಷ್ಟು ತ್ವರೆಯಾಗಿ ಕೆಂಪಗಿನ ಕಬ್ಬಿಣದ ತುಂಡನ್ನಾಗಲೀ ಮಸಿಗೆಂಡವನ್ನಾಗಲೀ ಆ ಘಾಯಕ್ಕೆ ಇಡ ಬೇಕು; ಇಲ್ಲವೆ ಕಾರ್ಬೊಲಿಕ್ ಎಸಿಡ್ (carbolic acid[1]) ಯಾ ನಾಯಿಟ್ರಿಕ್ ಎಸಿಡ್ (nitric acid[1]) ತಕ್ಕುಗಳಷ್ಟು ಅದರ ಮೇಲೆ ಬಿಡ ಬಹುದು. ಅನಂತರ ನವಸಾಗರದ ದ್ರವ (liquor ammonia) ಹದಿನೈದು ತಟಕುಗಳನ್ನು ಒಂದು ಔನ್ಸ್ ನೀರಿನಲ್ಲಿ ಹಾಕಿ ತಕ್ಷಣ ಕೊಡವದು. ಮತ್ತು ವಿಷದ ಲಕ್ಷಣಗಳು ತೋರಿ ಬರುವ ಪಕ್ಷಕ್ಕೆ, ಅದನ್ನು ಕಾಲು ತಾಸಿ ಒಮ್ಮೆ ಮೂರು ನಾಲ್ಕು ಸಾರಿ ವರೆಗೆ ಅಷ್ಟೇ ಪರಿಮಾಣದಲ್ಲಿ ಕೊಡುತ್ತಾ ಬರುವದು ಸರ್ಪ ಕಚ್ಚಲ್ಪಟ್ಟವನು ಪ್ರಾಯಪ್ರಬುದ್ಧನಾಗಿದ್ದರೆ, ಬ್ರೇಂಡಿ, ರಮ್, ವ್ಹಿಸ್ಕಿ (Brandy, Rum, Whiskey) ಮುಂತಾದ ಉತ್ತೇಜಕ ದ್ರವವನ್ನು ಒಂದು ಔನ್ಸ್ ತೆಗದು ಅಷ್ಟೇ ನೀರು ಕೂಡಿಸಿ ಕೊಡ ಬಹುದು. ಮೇಲೆ ಹೇಳಿದ ಪ್ರಕಾರ ಕಟ್ಟು ಹಾಕಿದ ಅಧ ತಾಸಿನ ವರೆಗಾದರೂ ವಿಷದ ಚಿಹ್ನೆಗಳು ಕಂಡು ಬಾರದೆ ಇದ್ದರೆ, ಆ ಕಟ್ಟುಗಳನ್ನು ಸಡಲಿಸ ಬಹುದು; ಇಲ್ಲವಾದರೆ ಆ ಭಾಗ ಕೆಟ್ಟು ಹೋಗುವದು. ಆದರೆ ವಿಷದ ಚಿಹ್ನೆಗಳು ಕಂಡು ಬಂದರೆ, ವಿಷ ಪಟ್ಟವನು ವಿಷದಿಂದ ಉತಾರು ಆಗುವ ವರೆಗೆ ಇಲ್ಲವೆ ಆ ಕಟ್ಟು ಹಾಕಿದ ಭಾಗವು ತಣ್ಣಗಾಗಿ ಹಸುರುಗಟ್ಟುವ ವರೆಗೆ ಕಟ್ಟುಗಳನ್ನು ಸಡಿಲಿಸ ಬಾರದು.

ಕಚ್ಚಿದ ಘಾಯದ ಮೇಲೆ ಬಾಯಿಯನ್ನಿಟ್ಟು ಹೀರಿ ತೆಗಿಯುವ ಸಹ ಗುಣಕರವಾಗ ಬಹುದು; ಆದಾಗ್ಯೂ, ಹಾಗೆ ಹೀರಿ ತೆಗಿಯುವವನಿಗೆ ಒಂದು ವೇ ಅಪಾಯ ಬಂದೀತ ಾದ್ದರಿಂದ ಅದು ಅಷ್ಟು ಒಳ್ಳೇ ಉಪಾಯವೆಂದು ಹೇಳಲಾಗುವದಿಲ್ಲ.

ಇಷ್ಟೆಲ್ಲಾ ಮಾಡಿದಾಗ್ಯೂ ವಿಷದ ಲಕ್ಷಣಗಳು ಕಾಣ ಬಂದು ಹೆತ್ತಾ ರೋಗಿಯು ಮೂರ್ಛಿತನಾಗಿ ಸ್ವಯ ತಪ್ಪಿದರೆ, ಇಲ್ಲವೆ ವಾಂತಿ ಮಾಡುವ ಪಕ್ಷಕ್ಕೆ ಸಾಸಿವೆ ಒತ್ತಡ[2]ವನ್ನಾಗಲೀ, ಲಿಕ್ಕರ ಎಮ್ಮೋನಿಯಾ (liquor ammonia) ಎಂಬ ನವಸಾರಗರದ ದ್ರವವನ್ನಾಗಲೀ ಎದೆಗೂ ಗುಂಡಿಗೆಗೂ ಹಚ್ಚಿ ಉತ್ತೇಜಕಗಳನ್ನು ಕೊಟ್ಟು, ರೋಗಿಯನ್ನು ಬೆಚ್ಚಗಾಗಿರಿಸ ಬೇಕು; ಆದರೆ ಘಾಳಿ ಇಲ್ಲದ ಕೋಣೆಯಲ್ಲಿ ಮಲಗಿಸದೆ, ಸರಾವಾದ ಶುದ್ಧ ಘಾಳಿ ಜಲಿಸುವ ಬರಿದಾದ ಸ್ಥಳದಲ್ಲಿ ಮಲಗಿಸ ಬೇಕು. ರೋಗಿಯು ಪದು ಕುಂದಿ ಹೋದ ಪಕ್ಷಕ್ಕೆ, ಆತನನ್ನು ನಡಿಸ ಬಾರದು; ಆದರೆ ಮೇಲೆ ಹೇಳಿದಂತೆ ಉತ್ತೇಕಗಳನ್ನು ಕೊಟ್ಟು ಆತನನ್ನು ವಿಶ್ರಮಿಸ ಬೇಕು. ಅನೇಕ ಸಂಗತಿಗಳಲ್ಲಿ ನಿಶ್ಚೇತನವು ಭಯ ದೆಶೆಯಿಂದ ಉಂ

1) ಈ ಔಷಧಗಳು ಆಸ್ಪತ್ರಿಯಲ್ಲಿ ಆಗಲೀ ಎಲಾಯತೀ ಔಷಧ ಮಾರುವ ಅಂಗಡಿಲ್ಲಿ ಆಗಲೀ ತಿಕ್ಕುವವು.

2) ೧೪೭೭ನೇ ಇಸವಿಯ ಪಂಚಾಂಗದ ೫೩ನೇ ಪಾನಿನಲ್ಲಿರುವ ೬೨ನೇ ಅಂಕೆಯನ್ನು ನೋಡು.

ಟಾಗ ಬಹುದು; ವಿಷ ಸ್ವಭಾವವಲ್ಲದ ಜಂತುವಿನಿಂದ ಕಚ್ಚಲ್ಪಟ್ಟರ ಬಹುದು; ಹ್ಯಾಗೂ ಮೇಲಿನ ಚಿಕಿತ್ಸೆಯಿಂದ ಬೇಗ ಗುಣ ಪಡ ಬಹುದು. ವಿಷಪ್ರಯೋಗವಾದಾಗ್ಯೂ, ಅದು ರಕ್ತದಲ್ಲಿ ಶೇರಿ ಪ್ರಾಣಾಂತಕವಲ್ಲದ ಪಕ್ಷಕ್ಕೆ, ಮೇಲಿನ ಚಿಕಿತ್ಸೆಯು ಅತ್ಯುತ್ತಮವಾಗಿರುವದು. ಕಠಿಣ ವಿಷವೇರಿ ಪಕ್ಷಕ್ಕೂ ಅದಕ್ಕಿಂತ ಉತ್ತಮವಾದ ಬೇರೆ ಉಪಾಯ ತೋರುವದಿಲ್ಲಾ. ಜನರು ಮೂಢಮಂತ್ರವಾದವನ್ನಾಗಲೀ ರೂಢಿ ಇರುವ ವ್ಯರ್ಥವಾದ ಉತಾರುಗಳನ್ನಾಗಲೀ ಮಾಡಿ ಸುಯ ಕಳೆಯದಂತೆ ಜಾಗ್ರತೆಯಾಗಿರಲಿ.

ಸುಣ್ಣದ ರವೆ ಕಣ್ಣಿನಲ್ಲಿ ಬಿದ್ದದ್ದಕ್ಕೆ Particles of Lime in the Eyes.

ಇದಕ್ಕೆ ಶೀದ ನೀರು ಕಣ್ಣಿನಲ್ಲಿ ಹಾಕುವದರಿಂದ (೧೪೮[1]) ಸುಣ್ಣದ ರವೆ ಕರಗಿ ಹೋಗುವದು.

ಸುಟ್ಟ ಗುಳ್ಳೆ Burns and Scalds.

ಇದಕ್ಕೆ ೧೮೬ನೇ ಇಸವಿಯ ಪಂಚಾಂಗದ ೫೦ನೇ ಪಾನಿನಲ್ಲಿ ಬೆಂದ ಹುಣ್ಣಿಗೆ ಹೇಳಿರುವ ಚಿಕಿತ್ಸೆಯನ್ನು ಮಾಡುವದು.

ಸೂತಕ ನಿಂತು ಹೋಗುವದು (ಸೂತಕಬದ್ಧ) ಮುಂತಾದ ಸ್ತ್ರೀಯರ ಸೂತಕದ ಅಕ್ರಮ

Suspesion or Irregularity of Menstrual Discharge, Amenorrhœa.

ಇದಕ್ಕೆ ೧೮೬೬ನೇ ಇಸವಿಯ ಪಂಚಾಂಗದ ೨೪—೨೫ನೇ ಪಾನುಗಳಲ್ಲಿ ಹೇಳಿರುವ ಚಿಕಿತ್ಸೆಯನ್ನು ಮಾಡುವದು.

ಸೂಚಿಕಾವಾಯು, ಸೂತಿಕಾಸನ್ನಿ (ಗರ್ಭಾಶಯವಾಯು)

Hysterical Affections.

ಇದರ ಚಿಕಿತ್ಸೆಯನ್ನು ೧೮೬೬ನೇ ಇಸವಿಯ ಪಂಚಾಂಗದ ೫೬—೫೭ನೇ ಪಾನುಗಳಲ್ಲಿ ನೋಡುವದು.

ಸೊಂಟನೋವು, ಸೊಂಟವಾತ Lumbago.

ಇದಕ್ಕೆ ೧೮೬೧ನೇ ಇಸವಿಯ ಪಂಚಾಂಗದ ೪೯ನೇ ಪಾನಿನಲ್ಲಿ ಕಟಿಶೂಲೆಗೆ ಹೇಳಿರುವ ಚಿಕಿತ್ಸೆಯನ್ನು ಮಾಡುವದು.

ಸೊಳ್ಳೆ ಕಚ್ಚಿದ್ದಕ್ಕೆ To relieve the Irritation of Mosquito Bites.

ಇದಕ್ಕೆ ನಿಮ್ಮೇ ರಸವನ್ನಾಗಲೀ (೧೭೭[2]), ಶೀರ್ಕದ ಲೇಪವನ್ನಾಗಲೀ (೧೪೦[3])

1) ೧೮೬೧ನೇ ಇಸವಿಯ ಪಂಚಾಂಗದ ೫೪ನೇ ಪಾನಿನಲ್ಲಿ ನೋಡು.
2) ೧೮೬೩ನೇ ಇಸವಿಯ ಪಂಚಾಂಗದ ೫೭ನೇ ಪಾನಿನಲ್ಲಿ ನೋಡು.
3) ೧೮೬೧ನೇ ಇಸವಿಯ ಪಂಚಾಂಗದ ೫೦ನೇ ಪಾನಿನಲ್ಲಿ ನೋಡು.

ಹಚ್ಚುವದರಿಂದ ಉರುತವೂ ವೇಧನೆಯೂ ಶಮನವಾಗುವವು. ಅದಲ್ಲದೆ ಶಿರ್ಕ, ಕಳ್ಳು, ಮತ್ತು ನೀರು ಸಮ ಭಾಗವನ್ನು ತೆಗದು ಸೊಳ್ಳೆ ಕಚ್ಚಿದ ಭಾಗಕ್ಕೆ ಹಚ್ಚಿ ತಿಕ್ಕುವದು.

ಸ್ವಯತಪ್ಪುವಿಕೆ Insensibility.

ಯಾವ ಕಾರಣದಿಂದ ಸ್ವಯ ತಪ್ಪಿದ್ದಾಗ್ಯೂ, ಪ್ರಥಮತಾ ತಣ್ಣೀರಿನ ಧಾರೆ (೫೮[1]) ಕೊಡುವದಲ್ಲದೆ ಕರ್ಪೂರತೈಲದ ಪಿಚಕಾರಿ (೬೩[2]) ಹೊಡಿಯುವದರಿಂದ ಸಹ ಉತ್ತಾರಾಗಿ ಸ್ಮರಣೆ ಬರುವದು.

ಸ್ವಯಥು ಎಂಬ ಬಾವು Painful Tumours.

೧೮೮೫ನೇ ಇಸವಿಯ ಪಂಚಾಂಗದ ೫೩ನೇ ಪಾನಿನಲ್ಲಿ ನೋವಿನ ಗಡ್ಡಿಗೆ ಹೇಳಿರುವ ಚಿಕಿತ್ಸೆಯನ್ನು ಮಾಡುವದು.

ಸ್ವರಭಂಗ Loss of Voice.

ಇದೇ ಪಂಚಾಂಗದ ೪೨ನೇ ಪಾನಿನಲ್ಲಿ ನೋಡುವದು.

ಹರಳಿನ ಬೀಜದ ವಿಷಕ್ಕೆ Poisoning by Castor Oil-seed.

ಇದಕ್ಕೆ ನಿಂಬೀರಸ (೧೩೯[3]) ಕೊಡುವದು. ಇದರಿಂದ ವಿಷ ಉತ್ತಾರವಾಗುವದು.

ಹರಿವಾತ Neuralgia.

ಇದಕ್ಕೆ ೧೮೮೬ನೇ ಇಸವಿಯ ಪಂಚಾಂಗದ ೪೫--೪೬ನೇ ಪಾನುಗಳಲ್ಲಿ ಬಾಯಿ ನೋವಿಗೆ ಹೇಳಿದ ಚಿಕಿತ್ಸೆಯನ್ನು ಮಾಡುವದು.

ಹಲ್ಲಿನಲ್ಲಿರುವ ಟಾರ್ಟರ್ ಎಂಬ ಸುಣ್ಣವನ್ನು ತೆಗಿಯಲಿಕ್ಕೆ To remove Tartar from the Teeth.

ಇದಕ್ಕೆ ಒಂದು ೌನ್ಸ್ ಬಿಳಿಗಾರವನ್ನು (borax) ಒಂದುವರೆ ಪಾಯಿಂಟ್ ಬಿಸಿ ನೀರಿನಲ್ಲಿ ಹಾಕಿ ಕರಗಿಸಿ, ಅದು ತಣ್ಣಗಾಗುವದಕ್ಕಿಂತ ಮುಂಚೆ ಅದರಲ್ಲಿ ಒಂದು ಚಹಾಸೌಟಿನಷ್ಟು ಗುಗ್ಗುಳದ್ರವ (tincture of myrrh[4]) ವನ್ನೂ, ಒಂದು ಚಾಸೌಟಿನಷ್ಟು ಕರ್ಪೂರದ್ರವವನ್ನೂ (spirits of camphor[4]) ಹಾಕಿ, ಬಿರ್ಡೆ ಮುಚ್ಚಿಡುವದು. ಇದರಿಂದ ಒಂದು ವಾಯಿನ್ ಗ್ಲಾಸಿನಷ್ಟು ತೆಗದು, ಅದಕ್ಕೆ ಅರ್ಧಾ ಪಾಯಿಂಟ್ ಉಗುರುಬೆಚ್ಚಗೆ ನೀರು ಕೂಡಿಸಿ, ಆ ನೀರಿನಿಂದ ಹಲ್ಲನ್ನು ಮುಕ್ಕುಳಿಸಿ ತೊಳಿಯುವದು. ಇದರಿಂದ ಹಲ್ಲುಗಳಿಗಿರುವ ಟಾರ್ಟರ್ ಎಂಬ ಮೈಲೆ ಹೋಗಿ ಅವುಗಳು ಜೊಕ್ಕವಾಗಿ ಬಿಳಿದಾಗುವವು.

---

1) ಆದೇ ಇಸವಿಯ ಪಂಚಾಂಗದ ೫೩ನೇ ಪಾನಿನಲ್ಲಿ ನೋಡು.
2) ಆದೇ ಇಸವಿಯ ಪಂಚಾಂಗದ ೫೩ನೇ ಪಾನಿನಲ್ಲಿ ನೋಡು.
3) ೧೮೮೫ನೇ ಇಸವಿಯ ಪಂಚಾಂಗದ ೪೯ನೇ ಪಾನಿನಲ್ಲಿ ನೋಡು.
4) ಇವುಗಳು ಎಲಾಯತೀ ಔಷಧಗಳನ್ನು ಮಾರುವ ಅಂಗಡಿಗಳಲ್ಲಿ ದೊರಿಯುವವು.

ಹಲ್ಲುನೋವು Toothache.

ಅಫೀನಿ (೯೯೧) ಆಗಲೀ, ಕಾಚು (೨೯೨) ಆಗಲೀ ನೋವು ಇರುವ ಹಲ್ಲಿನಲ್ಲಿ ಇಟ್ಟದ್ದಾದರೆ, ಹಲ್ಲುನೋವು ಶಮನವಾಗಿ ಬಹುಶಾ ಗುಣ ಬರುವದು. ಇದರ ಸಂಗಡ ಸುಂಠೀ ಲೇಪ (೨೪೭[1]) ಇಲ್ಲವ ಸಾಸಿವೆಯ ಒತ್ತಡ (೬೨[2]) ಸಹ ಬಾಹ್ಯಚಿಕಿತ್ಸೆಯಾಗಿ ಮಾಡಬಹುದು. ಆದರೆ ಅನೇಕ ಸಂಗತಿಗಳಲ್ಲಿ ನೋವಿಗೆ ಕಾರಣವಾದ ಹಲ್ಲು ಮೆಲ್ಲಗೆ ಕಿತ್ತು ತೆಗಿಯುವದೇ ನಿಶ್ಚಯವಾಗಿ ಎಲ್ಲಾದಕ್ಕಿಂತ ವಾಸಿ.

೨೯೧. ಕೊರದು ಹೋದ ಹಲ್ಲಿನ ದೆಶೆಯಿಂದ ಉಂಟಾಗುವ ನೋವಿಗೆ ಒಂದು ಗ್ರೈನ್ ಅಫೀನಿಯನ್ನು[3] ಹಲ್ಲಿನ ರಂಧ್ರದಲ್ಲಿ ಇಟ್ಟದರಿಂದ ನೋವು ಶಮನವಾಗುವದು. ಆದರೆ ಹಲ್ಲಿನಲ್ಲಿ ಅಫೀನಿ ಇರುವ ವೇಳ್ಯದಲ್ಲಿ ಉಗ್ಗುಳನ್ನು ನುಂಗ ಬಾರದು.

೨೯೨. ಹಲ್ಲುನೋವಿಗೆ ಕಾರಣವಾದ ಹಲ್ಲು ಕೊರದು ಹೋಗಿ ಸ್ವಲ್ಪ ದುರ್ಮಾಂಸ ನಡುವೆ ಎದ್ದು ಬಂದರೆ, ಆ ರಂಧ್ರದಲ್ಲಿ ಚಿಕ್ಕದೊಂದು ಕಾಚಿನ ತುಂಡನ್ನು[4] ಇಟ್ಟು, ಕರಗಗೊಡ ಬೇಕು. ಇದರಿಂದ ಆಲ್ಲ ಒಗರುಗಟ್ಟಿ ನೋವು ಶಮನವಾಗುವದು.

ಹಶಿವೆ ಮಂದವಾಗುವದು (ಹಶಿವೆಗೆಡುವದು) Loss of Appetite.

ಇದಕ್ಕೆ ೧೮೭೭ನೇ ಇಸವಿಯ ಪಂಚಾಂಗದ ೧೮ನೇ ಪಾನಿನಲ್ಲಿ ಅದೀಪನಕ್ಕೆ ಹೇಳಿರುವ ಚಿಕಿತ್ಸೆಯನ್ನು ಮಾಡುವದು.

ಹುಚ್ಚು Insanity.

ಇದಕ್ಕೆ ಜಾಫಲದ ಮಾತ್ರೆಯನ್ನಾಗಲೀ,(೫೯೯[5]) ಜಾಫಲದ ಎಣ್ಣೆಯನ್ನಾಗಲೀ ೬೦[5]) ಕೊಟ್ಟು ಯಥೇಷ್ಟ ಮಲಶೋಧನೆ ಮಾಡಿಸುವದು, ಮತ್ತು ಸಾಸಿವೆಯ ಮಜ್ಜನ (೨೪೪[6]) ಸಹ ಭ್ರಾಂತಿಯ ಪ್ರಾರಂಭದ ಸ್ಥಿತಿಯಲ್ಲಿ ಬಹಳ ಗುಣಕರವಾಗಿರುವದು. ಆದಲ್ಲದೆ ರೋಗಿಯನ್ನು ಕೂಡುವಷ್ಟು ತ್ವರೆಯಾಗಿ ಘಟ್ಟಿಗ ವೈದ್ಯನ ಚಿಕಿತ್ಸೆಯಲ್ಲಿ ಇಡುವದಕ್ಕೆ ಆಲಸ್ಯ ಮಾಡ ಬಾರದು.

---

1) ೧೮೭೪ನೇ ಇಸವಿಯ ಪಂಚಾಂಗದ ೪೯ನೇ ಪಾನಿನಲ್ಲಿ ನೋಡು.

2) ೧೮೭೭ನೇ ಇಸವಿಯ ಪಂಚಾಂಗದ ೩೫ನೇ ಪಾನಿನಲ್ಲಿ ನೋಡು.

3) ಅಫೀನಿಯ ವಿಷಯ ೧೮೭೯ನೇ ಇಸವಿಯ ಪಂಚಾಂಗದ ೫೦ನೇ ಪಾನಿನಲ್ಲಿ ಶುರು ಆಗುವ ಎರಡನೇ ಟಿಪ್ಪಣಿಯಲ್ಲಿ ನೋಡು.

4) ೧೮೭೭ನೇ ಇಸವಿಯ ಪಂಚಾಗದ ೬೪ನೇ ಪಾನಿನಲ್ಲಿರುವ ಎರಡನೇ ಟಿಪ್ಪಣಿಯಲ್ಲಿ ನೋಡು.

5) ಜಾಫಲದ ಮಾತ್ರೆಯನ್ನಾಗಲೀ ಎಣ್ಣೆಯನ್ನಾಗಲೀ ಬಹಳ ಜಾಗ್ರತೆಯಿಂದ ಬಹು ಸ್ವಲ್ಪ ಪರಿಮಾಣದಲ್ಲಿ ಪ್ರಯೋಗಿಸ ಬೇಕು; ಯಾಕಂದರೆ ಅದು ಒಂದು ಅತಿವಿರೇಚಕ ವಿಷವಾಗಿರುತ್ತದೆ. ಈ ಮಾತ್ರೆ ಮತ್ತು ಎಣ್ಣೆಯನ್ನು ಕುರಿತು ೧೮೭೭ನೇ ಇಸವಿಯ ಪಂಚಾಂಗದ ೨೪—೨೫ನೇ ಪಾನುಗಳನ್ನೂ, ೪೪ನೇ ಪಾನಿನ ಬುಡದಲ್ಲಿರುವ ಟಿಪ್ಪಣಿಯನ್ನೂ ನೋಡುವದು.

6) ೧೮೭೯ನೇ ಇಸವಿಯ ಪಂಚಾಂಗದ ೪೬ನೇ ಪಾನಿನಲ್ಲಿ ನೋಡು.

ಹುಣ್ಣು Ulcer.

ಇದಕ್ಕೆ ೧೮೮೬ನೇ ಇಸವಿಯ ಪಂಚಾಂಗದ ೫೦ನೇ ಪಾನಿನಲ್ಲಿ ಕೀವು ಸೋರುವ ಹುಣ್ಣಿಗೆ ಹೇಳಿರುವ ಚಿಕಿತ್ಸೆಯನ್ನು ಮಾಡುವದು.

ಹುಣ್ಣು (ಸುಟ್ಟ) Burns.

ಇದಕ್ಕೆ ೧೮೮೬ನೇ ಇಸವಿಯ ಪಂಚಾಂಗದ ೫೦ನೇ ಪಾನಿನಲ್ಲಿ ಬೆಂದ ಹುಣ್ಣಿಗೆ ಹೇಳಿರುವ ಚಿಕಿತ್ಸೆಯನ್ನು ಮಾಡುವದು.

ಹುಳಿದ್ರವಗಳ ವಿಷಕ್ಕೆ Poisoning with Acids.

ಇದಕ್ಕೆ ಯಥೇಷ್ಟ ಸುಣ್ಣದ ತಿಳೀ ನೀರೂ ಹಾಲೂ (೧೭[1]) ಕೊಡುವದು. ಅವು ಸಮೀಪ ವಿಲ್ಲದಿದ್ದರೆ, ಸಾಬೂನು ಮತ್ತು ನೀರು, ಇಲ್ಲವೆ ಜೇಡಿಸುಣ್ಣ ನೀರಿನಲ್ಲಿ ಅರದು ಹೊಟ್ಟೆಗೆ ಕೊಡುವದು. ಅಕ್ಕೀ ಗಂಜಿ (೧೧೮ c.[2]) ಇಲ್ಲವೆ ಜಿಗಟು ತರದ ಇತರ ಪಾನವನ್ನಾಗಲೀ, ಮೊಟ್ಟೆಯ ಬಿಳುಪನ್ನಾಗಲೀ, ಒಂದು ಗುಟಿಕೆ ಬರೀ ಎಣ್ಣೆಯನ್ನಾಗಲೀ ಕೊಡ ಬಹುದು. ಈ ಚಿಕಿತ್ಸೆಯನ್ನು ತತ್‌ಕ್ಷಣ ಮಾಡುವದರಲ್ಲಿಯೇ ಅದರ ಜಯ ಹೊಂದಿರುತ್ತದೆ.

ಹುಳಿವು (ಅನ್ನಕೋಶದ) Acidity of the Stomach.

ಇದಕ್ಕೆ ೧೮೫೬ನೇ ಇಸವಿಯ ಪಂಚಾಂಗದ ೩೦ನೇ ಪಾನಿನಲ್ಲಿ ಇರುವ ೧೬, ೧೭, ೧೮, ೧೯ನೇ ಅಂಕೆಗಳಲ್ಲಿ ಹೇಳಿರುವ ಚಿಕಿತ್ಸೆಯನ್ನು ಮಾಡುವದು.

ಹೇನುಗಳ ಕಾಟ Lice infecting the various parts of the body.

ಇದಕ್ಕೆ ಕಾಕಮಾರೀ ಬೀಜದ ಎಣ್ಣೆ (೨೯೩), ಕಾಡುಜೀರಿಗೆಯ ಲೇಪ (೨೦೧[3]), ಇಲ್ಲವೆ (corrosive sublimate ಎಂಬ) ರಸಕರ್ಪೂರದ ನೀರನ್ನು (೨೯೪) ಹಚ್ಚುವದರಿಂದ ಹೇನುಗಳು ನಾಶವಾಗುವವು.

೨೯೩. ಹುಳಗಳಿಗೆ ವಿಷವಾಗಿರುವಂಥಾ ಕಾಕಮಾರೀ ಬೀಜವನ್ನು[4] ತ್ಕಂದು, ಅದರ

---

1) ೧೮೫೬ನೇ ಇಸವಿಯ ಪಂಚಾಂಗದ ೩೦ನೇ ಪಾನಿನಲ್ಲಿ ನೋಡು.

2) ೧೮೮೦ನೇ ಇಸವಿಯ ಪಂಚಾಂಗದ ೪೬ನೇ ಪಾನಿನಲ್ಲಿ ನೋಡು.

3) ೧೮೮೬ನೇ ಇಸವಿಯ ಪಂಚಾಂಗದ ೫೦ನೇ ಪಾನಿನಲ್ಲಿಯೂ ಅದರ ಅಡಿಯಲ್ಲಿರುವ ೧ನೇ ಟಪ್ಪಣಿಯಲ್ಲಿಯೂ ನೋಡು.

4) *Engl:* Cocculus Indicus; ಹಿಂದು: ಕಾಕಮಾರಿಕೆ ಬೀಂಜ್; ತಮ: ಕಾಕಾಯಿಕೊಲ್ಲಿವರ್ಯೈ, ಪೇನ್ ಕೊಟ್ಟೈ; ತೆಲು: ಕಾಕಮಾರಿ, ಕಾಕಚಂಪ; ಮಲ: ಕರಂತಕತ್ತಿನ್‌ಕಾಯಿ, ಪೊಲ್ಲಕ್ಕಾಯಿ. —ಕಾಕಮಾರಿ ಹಣ್ಣು ಒಣಗಿದ್ದು ಗಂಧಸರಕಿನ ಅಂಗಡಿಗಳಲ್ಲಿ ದೊರೆಯುವದು. ಇದು ಬಟಾಣಿಯಷ್ಟು ಸಣ್ಣದಾಗಿ, ಉರುಳಿಕಾಯಿಯ ರೂಪವಿದ್ದು, ಕಠ್ಯಗಾಗಿಯೂ ನೆರಿ ಬಿದ್ದದ್ದಾಗಿಯೂ ಇದ್ದು, ಅದರ ತಿಪ್ಪೆಯೊಳಗಿನ ಬೀಜವು ಎರಡು ಹೋಳಾಗಿದ್ದು, ಹಳದಿ ಬಣ್ಣದ್ದಾಗಿಯೂ ತೈಲಭಾವದ್ದಾಗಿಯೂ ಕಹಿಯಾಗಿಯೂ ಇರುವದು. ಇದು ತೀಕ್ಷ್ಣ ವಿಷವಾಗಿರುವದರಿಂದ ಹೊಟ್ಟೆಯೊಳಗೆ ಸರ್ವಥಾ ಕೊಡಲಾಗದು. ಇದರ ಮುಖ್ಯ ಪ್ರಯೋಜನವು ಕ್ರಿಮಿಮಾರಕವಾಗಿ, ಅಂದರೆ ಮೈಯಲ್ಲಿ ಕಾಡುವ ಹೇನು ಮುಂತಾದ ಕ್ರಿಮಿಗಳನ್ನು ನಾಶ ಮಾಡುವಂಥಾದ್ದಾಗಿ ಇರುತ್ತದೆ.

೫೦ ನಿನಗೆ ಕ್ಷೇಮವನ್ನುಂಟು ಮಾಡುವೆನು; ನಿನ್ನ ದೆಬ್ಬೆಗಳನ್ನು ಸ್ವಸ್ಥ ಮಾಡುವೆನು,

ಶಿಪ್ಪೆ ಕಳಚಿ, ಶುಮಾರು ೮೦ ಗ್ರೈನ್ ಬೀಜವನ್ನು ತೆಗದು, ನೀರಿನಲ್ಲಿ ದಪ್ಪಾಗಿ ಅರದು, ಅದಕ್ಕೆ ಒಂದು ಔನ್ಸ್ ನೆಣವಾಗಲೀ ಮುರ್ಗಿನಹುಳಿಯ ಎಣ್ಣೆಯಾಗಲೀ[1] ತುಪ್ಪವಾಗಲೀ ಹಾಕಿ ಚನ್ನಾಗಿ ಬೆರಿಸಿ ಮಾರ್ದಿಸಿ ಹಚ್ಚುವದು. ಈ ಪ್ರಕಾರ ಲೇಪಿಸುವಾಗ ಸವೆದ ಇಲ್ಲವೆ ಹುಣ್ಣು ಇರುವ ಮೈಭಾಗವನ್ನು ಬಿಟ್ಟು ಬಿಡ ಬೇಕು; ಇಲ್ಲದಿದ್ದರೆ, ಅದರಲ್ಲಿ ರಕ್ತ ಹೀರಿ, ಆ ಬೀಜದ ವಿಷ ಮೈಯಲ್ಲಿ ವ್ಯಾಪಿಸಿಕೊಂಡೀತು.

೨೯೪. (Corrosive sublimate) ಶವೀರಂ[2] ಎಂಬ ಈ ರಸಕರ್ಪೂರ ೩ ಗ್ರೈನ್ ತೆಗದು, ಒಂದು ಔನ್ಸ್ ನೀರಿನಲ್ಲಿ ಕಲಕಿಸ ಬೇಕು. ಈ ನೀರಿನಿಂದ ಹೇನು ಇರುವ ತಲೆಯನ್ನು ದಿನಕ್ಕೆ ೨ ಸಾರಿ ಚನ್ನಾಗಿ ತೊಳಿಯುವದು. ಈ ನೀರನ್ನು ಸಾಧಾರಣ ಪ್ರಯೋಗಿಸುವಲ್ಲಿ ಬಾಧಕವೇನೂ ಇಲ್ಲ. ಆದರೆ ಹುಣ್ಣಿರುವಲ್ಲಿ ಆಗಲೀ, ಮೈಸವೆದಿರುವಲ್ಲಿ ಆಗಲೀ ಹಚ್ಚದಂತೆ ಜಾಗ್ರತೆಯಾಗಿರ ಬೇಕಷ್ಟೆ.

ಹೊಟ್ಟೆ ಇಳಿಯೋಣ, ಗರ್ಭಪಾತ Abortion.

ಇದಕ್ಕೆ ೧೮೮೯ನೇ ಇಸವಿಯ ಪಂಚಾಂಗದ ೫೭—೫೮ನೇ ಪಾನುಗಳಲ್ಲಿ ಗರ್ಭಸ್ರಾವಕ್ಕೆ ಹೇಳಿರುವ ಚಿಕಿತ್ಸೆಯನ್ನು ಮಾಡುವದು. ಅದಲ್ಲದೆ ೧೮೭೯ನೇ ಇಸವಿಯ ಪಂಚಾಂಗದ ೪೩ನೇ ೪೪ನೇ ಪಾನುಗಳಲ್ಲಿ ಅಸ್ಥಿಸ್ರಾವಕ್ಕೆ ಹೇಳಿರುವ ಚಿಕಿತ್ಸೆಯನ್ನೂ, ೧೮೭೭ನೇ ಇಸವಿಯ ಪಂಚಾಂಗದ ೨೦-೨೨ನೇ ಪಾನುಗಳಲ್ಲಿ ಅಂತಕೋಶಗಳಿಂದ ನೆತ್ತರು ಹರಿಯೋಣಕ್ಕೆ ಹೇಳಿರುವ ಚಿಕಿತ್ಸೆಯನ್ನೂ ಸಹ ಸರಿ ನೋಡುವದು.

ಹೊಟ್ಟೆನೋವು, ಹೊಟ್ಟೆಶೂಲೆ Colic.

ಇದಕ್ಕೆ ೧೮೮೦ನೇ ಇಸವಿಯ ಪಂಚಾಂಗದ ೩೮—೪೦ನೇ ಪಾನುಗಳಲ್ಲಿ ಉದರ ಶೂಲೆಗೆ ಹೇಳಿರುವ ಚಿಕಿತ್ಸೆಯನ್ನು ಮಾಡುವದು.

ಹೊಟ್ಟೆಹುಳ Worms.

ಇದಕ್ಕೆ ೧೮೮೬ನೇ ಇಸವಿಯ ಪಂಚಾಂಗದ ೫೦—೫೩ನೇ ಪಾನುಗಳಲ್ಲಿ ಕ್ರಿಮಿರೋಗಕ್ಕೆ ಹೇಳಿರುವ ಚಿಕಿತ್ಸೆಯನ್ನು ಮಾಡುವದು.

ಕ್ಷಯರೋಗ Consumption.

ಕ್ಷಯರೋಗವೆಂದರೆ ಕ್ರಮೇಣ ಮೈಸೊರಗಿ ಹೋಗಿ, ರಕ್ತಬಲಕುಂದಿ, ಶ್ವಾಸಕೋಶಗಳ ಮೇಲೆ ಚಿಕ್ಕ ಗುಳ್ಳೆಗಳು (tubercles) ಉಂಟಾಗಿ, ಕೆಮ್ಮು, ಎದೆನೋವು, ಖಾಸಶ್ವಾಸ, ಕ್ರಮೇಣ ಹೆಚ್ಚುವ ಅಶಕ್ತಿ, ಅಸ್ಥಿಜ್ವರ, ಕಡೆಗೆ ಕಫವೇರಿ ಕೀವಾಗಿ, ಅತಿಸಾರ ಮುಂತಾದ

[1] ಇದಕ್ಕೆ ಹಿಂದುಸ್ಥಾನಿಯಲ್ಲಿ ಕೋಕುಮ್‌ಕೆ ತೇಲ್ ಎಂದು ಹೇಳುತ್ತಾರೆ. ೧೮೭೭ನೇ ಇಸವಿಯ ಪಂಚಾಂಗದ ೫೩ನೇ ಪಾನಿನಲ್ಲಿ ನೋಡು.

[2] *Engl*: Corrosive Sublimate; ಹಿಂದು: ದಖ: ಶವೀರ, ಶವೀರಂ; ತಮ: ವೀರಂ, ಶವೀರಂ; ತೆಲು: ವೀರಮು, ಶವೀರಮು.—ಕಠಿಣ ವಿಷವಾಗಿರುವದರಿಂದ ಇದನ್ನು ಮಕ್ಕಳಾಗಲೀ ತಿಳಿಯದ ಸೇವಕರಾಗಲೀ ಮುಟ್ಟದಂತೆ ದೂರವಿಡ ಬೇಕು.

ಚಿನ್ಹೆಗಳು ತೋರಿ, ರೋಗ ವಿಾರುತ್ತಾ ಪ್ರಾಣಾಂತಿಕವಾಗುವದು. ಶ್ವಾಸಕೋಶಗಳ ಬೀಗು (pneumonia) ಎಂಬ ರೋಗದ ದೆಶೆಯಿಂದ ಸಹ ಈ ಕ್ಷಯ ಹಿಡಿಯುವದುಂಟು.

ಚಿಕಿತ್ಸೆ: ಇದಕ್ಕೆ ಮುಖ್ಯವಾಗಿ ವಿಾನಿನ ಎಣ್ಣೆಯನ್ನು (೧೨೬[1]) ತಪ್ಪದೆ ಕೊಡ ಬೇಕು. ಇದರ ಸಂಗಡ ಸುಣ್ಣದ ತಿಳೀ ನೀರು (೧೭,೧೮,೧೯[2]) ಮತ್ತು ಹಾಲು ಸಾಧಾರಣ ಪಾನಕವಾಗಿ ಕೊಡ ಬಹುದು; ಆದಲ್ಲದೆ ಕೆಮ್ಮು ಮತ್ತು ಖಾಸಶ್ವಾಸವಿದ್ದರೆ, ಎದೆಗೆ ಸಾಸಿವೇ ಒತ್ತಡ (೬೨[3]), ಇಲ್ಲವೆ ಜಾಫಲದ ಮುಲಾಮು (೧೬೪[4]) ಹಚ್ಚಿ ಶಮನವಾಗುವದು. ಅದಲ್ಲದೆ ಬಿಸಿ ನೀರಿನ ಹೊಗೆ (೧೨೮[5]), ಇಲ್ಲವೆ ಬೆಂಡೆಕಾಯಿಯ ಕಷಾಯದ (೧೮೯[6]) ಹೊಗೆಯನ್ನು ಗುಣಕರವಾಗಿ ಕೊಡ ಬಹುದು. ಮತ್ತು ಎದೆಯನ್ನು ಶೀರ್ಕದ ನೀರಿನಿಂದ ತೊಳಿಯುವದು (೧೧೪[7]). ಕ್ಷಯರೋಗದಲ್ಲಿ ಉಂಟಾಗುವ ಅತಿಸಾರಕ್ಕೆ (ಜುಲಾಬಿಗೆ) ಫಟಿಕಾರದ ಚೂರ್ಣ (೨೯[8]), ಮೈಲತುತ್ತಿನ ಮಾತ್ರೆ (೨೭[9]) ಕೊಟ್ಟು ಗುಣ ನೋಡ ಬಹುದು. ರಾತ್ರೀ ಕಾಲದಲ್ಲಿರುವ ಅತಿರೇಕ ಬೆವರಿಗೆ ಗುಲಾಬಿನ ಎಲೆಗಳ ಕಲ್ಕ (೨೯೫) ಕೊಡುವದು, ಮತ್ತು ಎದೆಯನ್ನು ಶೀರ್ಕದ ವಿಶ್ರದಿಂದ (೧೯೬[8]) ತೊಳಿಯುವದು. ಬಾಯಿಯಲ್ಲಿ ಅಗ್ರವೂ, ನಾಲಿಗೆ ಒಡಿಯೋಣವೂ ಇದ್ದರೆ, ಬಿಳಿಗಾರದ ಲೇಪ (೧೦೨[8]), ಇಲ್ಲವೆ ಫಟಿಕಾರದ ನೀರನ್ನು (೭೬[10]) ಪ್ರಯೋಗಿಸ ಬಹುದು. ಶ್ವಾಸಕೋಶದಿಂದ ನೆತ್ತ್ರರ ಹರಿಯೋಣಕ್ಕೆ ೧೪೭೭ನೇ ಇಸವಿಯ ಪಂಚಾಂಗದ ೨೦—೨೨ನೇ ಪಾನುಗಳಲ್ಲಿ ಹೇಳಿರುವ ಚಿಕಿತ್ಸೆಯನ್ನು ಮಾಡುವದು. ಆದಲ್ಲದೆ ಶೀರ್ಕವು ಬಾಹ್ಯಲೇಪವಾಗಿ (೧೯೬[8]) ಆ ವಿಷಯದಲ್ಲಿಯೂ ಪ್ರಯೋಜನವಾಗುವದು.

೨೯೫. ಗುಲಾಬಿನ[11] ಎಲೆಗಳು ಒಳ್ಳೇ ಒಗರಾಗಿಯೂ ತೇಜವರ್ಧಕವಾಗಿಯೂ ಇರುತ್ತವೆ. ಗುಲಾಬಿನ ಹಶಿ ಎಲೆಗಳನ್ನು ಒಂದು ಔನ್ಸ್ ತೂಕ ತೆಗದು, ಅರ್ಧ ಪಾಯಿಂಟ್ ಬಿಶಿ ನೀರಿನಲ್ಲಿಟ್ಟು ಕಲ್ಕ ತೆಗಿಯುವದು. ರಕ್ತ ಕಾರುವದನ್ನೂ ಆಂತರೇಂದ್ರಿಯಗಳಿಂದ ರಕ್ತ ಹರಿಯುವದನ್ನೂ ನಿಲ್ಲಿಸುವದಕ್ಕೆ ಈ ಕಲ್ಕವನ್ನು ಕೊಡುತ್ತಾರೆ. ಅದೇ ಕಲ್ಕವನ್ನು ಬಾಯಿಯಲ್ಲಿ ಮುಕ್ಕುಳಿಸುವದರಿಂದ ಗಂಟ್ಲೊಡೆಯೋಣವು ಶಮನವಾಗುವದು. ಈ ಎಲೆಗಳ ಕಲ್ಕವನ್ನು ಕ್ಷಯರೋಗದಲ್ಲಿ ಉಂಟಾಗುವ ರಾತ್ರೆಬೆವರು ನಿಲ್ಲಿಸುವದಕ್ಕೂ ಕೊಡುತ್ತಾರೆ.

---

1) ಇದನ್ನು ಮಾಡುವ ಮತ್ತು ಕೊಡುವ ಕ್ರಮವನ್ನು ಕುರಿತು ೧೪೭೭ನೇ ಇಸವಿಯ ಪಂಚಾಂಗದ ೨೭ನೇ ಪಾನಿನಲ್ಲಿರುವ ೭ನೇ ಅಂಕೆಯಲ್ಲಿಯೂ ಅದರ ಟಪ್ಪಣಿಯಲ್ಲಿಯೂ ನೋಡು. ಆದಲ್ಲದೆ ೧೪೭೫ನೇ ಇಸವಿಯ ಪಂಚಾಂಗದ ೪೭ನೇ ಪಾನಿನಲ್ಲಿ ಇರುವ ೧೩೭ನೇ ಅಂಕೆಯನ್ನೂ, ೧೪೭೪ನೇ ಇಸವಿಯ ಪಂಚಾಂಗದ ೫೪ನೇ ಪಾನಿನಲ್ಲಿರುವ ೩೭ಂನೇ ಅಂಕೆಯನ್ನೂ ಸರಿ ನೋಡು.

2) ೧೪೭೭ನೇ ಇಸವಿಯ ಪಂಚಾಂಗದ ೭ಂನೇ ಪಾನಿನಲ್ಲಿ ನೋಡು. ಸುಣ್ಣದ ತಿಳೀ ನೀರು ಮತ್ತು ಹಾಲು ಕ್ಷಯರೋಗದಲ್ಲಿ ಅಗ್ಯಾಗ್ಯೆ ಕೊಡುವದು ಒಳ್ಳೇದು; ಆದರೆ ಆದರಿಂದ ಪಥ್ಯಕ್ಕೆ ಸ್ವಲ್ಪ ಸಹಾಯವಾಗಿ ಬಹಳ ಗುಣ ಕಂಡಾಗ್ಯೂ, ರೋಗವನ್ನು ವಾಸಿ ಮಾಡುವದಕ್ಕೆ ಅದು ಸಾಕಾದ್ದೆಂದು ಎಣಿಸ ಕೂಡದು.

3) ೧೪೭೭ನೇ ಇಸವಿಯ ಪಂಚಾಂಗದ ೩೫ನೇ ಪಾನಿನಲ್ಲಿ ನೋಡು.

4) ೧೪೭೩ನೇ ಇಸವಿಯ ಪಂಚಾಂಗದ ೫೦ನೇ ಪಾನಿನಲ್ಲಿ ನೋಡು.

5) ೧೪೭೩ನೇ ಇಸವಿಯ ಪಂಚಾಂಗದ ೪೭ನೇ ಪಾನಿನಲ್ಲಿ ನೋಡು.

6) ೧೪೭೦ನೇ ಇಸವಿಯ ಪಂಚಾಂಗದ ೪೭ನೇ ಪಾನಿನಲ್ಲಿ ನೋಡು.

7) ೧೪೭೭ನೇ ಇಸವಿಯ ಪಂಚಾಂಗದ ೩೪ನೇ ಪಾನಿನಲ್ಲಿ ನೋಡು.

8) ೧೪೭೩ನೇ ಇಸವಿಯ ಪಂಚಾಂಗದ ೫೦ನೇ ಪಾನಿನಲ್ಲಿ ನೋಡು.

9) ೧೪೭೯ನೇ ಇಸವಿಯ ಪಂಚಾಂಗದ ೫೧ನೇ ಪಾನಿನಲ್ಲಿ ನೋಡು.

10) ೧೪೭೯ನೇ ಇಸವಿಯ ಪಂಚಾಂಗದ ೭೯ನೇ ಪಾನಿನಲ್ಲಿ ನೋಡು.

11) ಮೇಲಿನ ಗುಲಾಬಿನ ಎಲೆಯ ವಿವರವು (Enquire Within Upon Everything ಎಂಬ) ಇಂಗ್ಲಿಷ್ ಪುಸ್ತಕದಿಂದ ಎತ್ತಿ ತೆಗದು ಭಾಷಾಂತರಿಸಿದ್ದು.

ಮುಂದಜ್ವರದನಂತರ ಉಂಟಾಗುವ ಅಶಕ್ತಿಗೆ ಈ ಕಲ್ಕದಲ್ಲಿ (sulphuric acid dilute[1] ಎಂಬ) ತೆಳು ಮಾಡಿದ ಗಂಧಕದ್ರವ ಕೆಲವು ತಟುಕುಗಳನ್ನು ಹಾಕಿ ಕೊಡುವದು ತೇಜವರ್ಧಕವಾಗಿರುವದು. ಈ ಕಲ್ಕವನ್ನು ಪ್ರಾಯಸ್ಥರಿಗೆ ಸಾರಿಗೆ ೨-೪ ಔನ್ಸ್ ಕೊಡ ಬಹುದು. ಈ ಪರಿಮಾಣವನ್ನು ಪ್ರಾಯಕ್ಕೂ ದೇಹದ ಸ್ಥಿತಿಗೂ ಅನುಸಾರವಾಗಿ ಹೆಚ್ಚುಕಡಿಮೆ ಮಾಡ ಬಹುದು.

ಕ್ಷಿಪ್ರಪ್ರಸನ್ನಿ Apoplexy.

ಇದಕ್ಕೆ ೧೪೭೭ನೇ ಇಸವಿಯ ಪಂಚಾಂಗದ ೨೨—೨೫ನೇ ಪಾನುಗಳಲ್ಲಿ ಅರ್ನಾರಿ ಬೇನೆಗೆ ಹೇಳಿರುವ ಚಿಕಿತ್ಸೆಯನ್ನು ಮಾಡುವದು.

ಕ್ಷುದ್ರಮಸೂರಿ Measles.

ಇದಕ್ಕೆ ೧೪೮೪ನೇ ಇಸವಿಯ ಪಂಚಾಂಗದ ೪೬—೪೮ನೇ ಪಾನುಗಳಲ್ಲಿ ಹೇಳಿರುವ ಚಿಕಿತ್ಸೆಯನ್ನು ಮಾಡುವದು.

☞ ಪಂಡಿತ ವೇರಿಂಗ್ ಧೊರೆಯು ಇಂಗ್ಲಿಷಿನಲ್ಲಿ ರಚಿಸಿದ ಪುಸ್ತಕ[2] ದಿಂದ ಎತ್ತಿತೆಗದು ರೋಗಗಳ ಅಕಾರಾದಿ ಕ್ರಮದಲ್ಲಿ ಕನ್ನಡಿಸೋಣಾಗುತ್ತಾ ಬಂದ ಶರೀರಚಿಕಿತ್ಸೆ ಎಂಬ ಮೇಲಿನ ವಿವರವು ೧೪೬೬ನೇ ಇಸವಿಯ ಪಂಚಾಂಗದಂಗ್ಳನೇ ಪಾನಿನಲ್ಲಿ ಪ್ರಾರಂಭವಾಗಿ, ಹನ್ನೆರಡು ವರುಷಗಳ ಪರಿಯಂತರ ಸಾಗಿ, ಈ ಹದಿಮೂರನೇ ವರುಷದ ಪಂಚಾಂಗದಲ್ಲಿ ಸಮಾಪ್ತವಾಯಿತು.

ಮೇಲಿನ ಶರೀರ ಚಿಕಿತ್ಸೆಯ ಇಡೀ ವಿವರದಲ್ಲಿ ಪ್ರಸ್ತಾಪಿಸೋಣಾದ ರೋಗಗಳ

ಅನುಕ್ರಮಣಿಕೆ.

	ಇಸವಿ:	ಪುಟ:
ಅಂಟುರೋಗ Amenorrhœa.	1876	24
ಅಂತಕೋರ್ತಗಳಿಂದ ನೆತ್ತರ ಹರಿಯೋಣ Hæmorrhage from the Internal Organs.	1877	19
ಅಂತರಾಯಾಮ Chorea.	1876	25
ಅಂತರ್ವಮಿ Waterbrash.	1876	31
ಅಗ್ನಿಮಾಂದ್ಯ Dyspepsia.	1876	27
ಅಜೀರ್ಣ Indigestion.	1876	27
ಅಜೀರ್ಣಾಂಶ Waterbrash.	1876	31
ಅಡಲಭ್ರಮಣಿ Delirium.	1876	31
ಅತಿಸಾರ Diarrhœa.	1876	32
ಅದೀಪನ Loss of Appetite.	1877	18
ಅನ್ನಕೋಶದ ಹುಳಿವು Acidity of Stomach.	1877	19
ಅನ್ನದ್ವೇಷ Loss of Appetite.	1877	18
ಅಪಸ್ಮಾರ Epilepsy.	1878	44
ಅಫೀಮಿನ ವಿಷಕ್ಕೆ Poisoning by Opium.	1878	46
ಅರಸುಹುಣ್ಣು Carbuncle.	1878	48
ಅರಸಿನಮುಂಡಿಗೆ Jaundice.	1879	36
ಅರುಂತುದ ವಿಷಕ್ಕೆ Poisoning by Mercurial Salts.	1879	38
ಅರ್ನಾರಿಬೇನೆ Apoplexy.	1877	22
ಅರ್ತಸ್ಸು Prolapsus of Anus.	1879	39
ಅಶಕ್ತಿ Debility.	1879	41
ಅಶ್ಮರಿ Gall-stone.	1879	42
ಅಸ್ಥಿಸ್ರಾವ Leucorrhœa.	1879	43
ಅಳಿಸ ಕೂಡದ ರೋಗ Tetanus.	8188	44
ಆನೆಕಾಲು Elephantiasis.	1887	54
ಆಮಶಂಕೆ, ಆಮಾತಿಸಾರ Dysentery.	1879	45
ಆಮ್ಲಸ್ಥೈತ್ಯ Acidity of Stomach.	1877	19
ಆಸನರೋಗ Prolapsus of Anus.	1870	39

[1] ಇದು ಎಲಾಯತೀ ಔಷಧಗಳನ್ನು ಮಾರುವ ಅಂಗಡಿಯಲ್ಲಿ ದೊರಿಯುವದು.

[2] Remarks on the Uses of Some of the Bazaar Medicines and Common Plants of India.

	ಇಸವಿ:	ಪುಟ:
ಅಸ್ಯಪಾಕ Ulceration of the Mouth.	1879	50
ಇಂದ್ರಿಯಸ್ಖಲನ Spermatorrhœa.	1880	35
ಉಗುಳುರೋಗ Salivation.	1880	37
ಉದರಗ್ರಂಥಿ ದಪ್ಪವಾಗೋಣ Enlargement of the Spleen.	1880	37
ಉದರಶೂಲೆ Colic.	1880	38
ಉಬ್ಬಸ Asthma.	1880	40
ಉಮ್ಮತ್ತದ ವಿಷಕ್ಕೆ Poisoning by Datura.	1880	43
ಉರಿಗಣ್ಣು Ophthalmia.	1881	51
ಉರಿಮೂತ್ರ Scalding on passing Urine.	1886	54
ಉರುತ, ಉರುಪು Inflammation.	1880	43
ಉಸುರುತೆಕ್ಕು Difficulty of Breathing	1888	43
ಉಳುಕು Sprain.	1880	46
ಎದೆಗುಂಡಿಗೆ ಬಡಿಯೋಣ Palpitation of the Heart.	1881	41
ಎದೆವುರಿ Heartburn.	1881	43
ಎಲುಬುಗಳ ರೋಗ, ಎಲುವಡಿ Affections of Bones.	1881	43
ಎಳವು (ಕರಳುಗಳ) ವ್ಯಾಧಿ Spasmodic Affections of Bowels.	1881	44
ಔದುಂಬರಕುಷ್ಠರೋಗ Leprosy.	1879	52
" " "	1883	41
ಕಟಿಶೂಲೆ, ಕಟಿಸ್ತಂಭವಾತ Lumbago.	1881	48
ಕಟ್ಯೂರುಭಾಗದ ವಾತ Sciatica.	1881	49
ಕಠಿಣ ಜ್ವರ Ardent Fever.	1885	43
ಕಣಗಲಗಡ್ಡೀ ವಿಷಕ್ಕೆ Poisoning by Cassava Root.	1881	49
ಕಣಜಹುಳ ಚುಚ್ಚಿದ್ದಕ್ಕೆ Stings of Wasps.	1881	50
ಕಣ್ಣುಕತ್ತಲೆ Fainting.	1881	50
ಕಣ್ಣಿನ ವ್ಯಾಧಿ, ಕಣ್ಣುಬೇನೆ Affections of Eyes.	1881	51
ಕಪ್ಪೆಕೆಮ್ಮು Hooping Cough.	1881	54
ಕರುಳುಗಳ ವ್ಯಾಧಿ Affections of Bowels.	1881	44
ಕಲಿಜೆಯ ರೋಗ Affections of the Liver.	1882	45
ಕಲ್ಲುವ್ಯಾಧಿ Gall Stones.	1879	42
ಕಾಕಮಾರೀ ಬೀಜದ ವಿಷಕ್ಕೆ Poisoning by Cocculus Indicus.	1882	46
ಕಾಮದ ಉರಿ Irritation of the Genital Organs.	1882	46
ಕಾರುವದು Vomiting.	1887	51
ಕಾಲುರಿ Burning of the Feet.	1882	47
ಕಾಸರಕನ ಬೀಜದ ವಿಷಕ್ಕೆ Poisoning by Nux Vomica.	1882	48
ಕಿಬ್ಬೊಟ್ಟೆ ಉಬ್ಬಿಹೋಗೋಣ Flatulent Distension of the Abdomen.	1882	48
ಕೆಲುಬಿನ ವಿಷಕ್ಕೆ Poisoning with Verdigris.	1882	49
ಕಿವಿನೋವು Earache.	1882	49
ಕಿವಿಯಿಂದ ಕೀವು ಸೋರುವದು Discharge from the Ear.	1882	49
ಕಿವಿಹಾವುಕಚ್ಚಿದ ವಿಷಕ್ಕೆ Venomous Bites of Centipede.	1882	50
ಕೀಲುಗಳ ಬಾವು Enlargement of the Joints.	1882	50
ಕೀಲುಗಳ ನೋವು Injuries of the Joints.	1882	50
ಕೀವುಸೋರುವ ಹುಣ್ಣು Ulcer.	1882	50
ಕೀಳುಕರಳು ಹೊರಬರೋಣ Descent of Lower Bowels.	1879	39
ಕುಚಗ್ರದ ಹುಣ್ಣು, ಘಾಯ Sore or Cracked Nipples.	1882	56
ಕುಟಿಲವಾತ Rickets.	1882	57
ಕುತ್ತಿಗೆಬೀಗು ಕುತ್ತಿಗೆತಿಕ್ಕು Stiffneck.	1882	59
ಕುದುರೆಲುಬಿನ ಬಾವು Nodes, or Swelling on the Shinbone.	1882	59
ಕುರುಗಳು Boils.	1882	59
ಕುರು Abscess.	1886	48
ಕುಷ್ಠರೋಗ Leprosy.	1879	52
" "	1883	41
ಕೃತರೋಗ Wasting of the Body.	1883	44
ಕೆಂಜ್ವರ Scarlatina.	1885	41
ಕೆನ್ನೆಬೀಗು Mumps.	1883	44
ಕೆಪ್ಪಡೆ Mumps.	1883	44
ಕೆಮ್ಮುಗಳು Coughs.	1883	46
ಕೋರ Measles.	1884	46
ಕ್ರಮ ತಪ್ಪಿ ಮುಟ್ಟಾಗುವದು Irregular Menstruation.	1876	24
ಕ್ರಿಮಿರೋಗ Worms.	1883	50
ಖಜ್ಜು Itch.	1883	53
ಖಾಸಶ್ವಾಸ Bronchitis.	1883	53
ಗಂಟುಗಳ ಬೆಳವು Enlargement of the Joints.	1882	50
ಗಂಟ್ಲೊಡೆಯೋಣ Hoarseness.	1888	42
ಗಂಡಮಾಲೆ Scrofula.	1883	54
ಗರ್ಭಪಾತ Abortion.	1883	57
ಗರ್ಭವಾಯು Hysterical Affections.	1883	56
ಗರ್ಭಶೂಲೆ Painful Affections of Uterus.	1884	41
ಗರ್ಭಶ್ರಾವ Abortion.	1883	57
ಗರ್ಭಾತಿಸಾರ Vaginal Discharges.	1884	42

	ಇಸವಿ:	ಪುಟ:
ಗರ್ಭಾವಸ್ಥೆ Pregnancy.	1883	55
ಗರ್ಭಾಶಯದಾಹ Hysterical Affections.	1883	56
ಗರ್ಭಾಶಯ ವ್ಯಾಧಿ Affections of the Womb.	1884	41,42
ಗಿನೀಯ ಹುಳ Guinea Worm.	1884	43
ಗುಂಡಿಗೆ ಅಡಲಪಡುವದು Palpitation of the Heart.	1881	41
ಗುಂಡಿಗೆಯಿಂದ ನೆತ್ತರ ಹರಿಯೋಣ Hæmorrhage from the Heart.	1877	20
ಗುಲ್ಮವ್ಯಾಧಿ Enlargement of the Spleen.	1880	37
ಗೂರಲು Asthma.	1880	40
ಗ್ರಹಣಿ Rickets.	1882	57
ಘಾಯಗಳು Wounds.	1884	44
ಚರ್ಮರೋಗಗಳು Skin Diseases.	1884	44
ಚಳುಕು Acute Rheumatism	1887	52
ಚಳ್ಳೆಗಳು Blisters	1883	47
ಚಿಕ್ಕಮ್ಮ Measles	1884	46
ಚೇಳು ಕಚ್ಚಿದ್ದಕ್ಕೆ Stings of Scorpions.	1881	50
ಛಳಿಜ್ವರ Ague.	1884	48
ಜರಗಡ್ಡೆ (ಜರಗೆಂಡೆ) Ague Cake	1880	37
ಜಜ್ಜು ಹೋಗುವದು Bruises.	1880	46
ಜಜ್ಜುವಿಕೆ Bruises	1884	53
ಜಲಮಸ್ತಕ ರೋಗ Water on the Brain (Hydrocephalus).	1884	54
ಜಲೋದರ Dropsy.	1884	54
ಜಗಳೆ ಕಚ್ಚಿದ್ದಕ್ಕೆ Leechbite.	1880	34
ಜುಲಾಬು Diarrhœa.	1876	32
ಜೊಲ್ಲು ಹೆಚ್ಚುವದು Salivation.	1880	37
ಜ್ವರ Fever.	1885,	41,43
ಜ್ವಾಲೆ Inflammation.	1880	43
ತರಟೆ ಹುಳ ಕಚ್ಚಿದ್ದಕ್ಕೆ Bites of Centipedes.	1881	50
ತಲೆಜಜ್ಜು Scald Head.	1885	46
ತಲೆಹುಂಡು Scurf in the Head.	1885	46
ತಲೆವ್ಯಾಧಿ Affections of Head.	1885	46
ತಲೆತಿಡಿತ Headache.	1885	47
ತೀಟೆ Itch.	1883	53
ತುರಿದದಿಕೆ Nettle Rash.	1885	48
ತೊಡೆವಾಳ Buboes.	1885	48
ತೊಡೆಸಂವಿನ ನೋವು Sciatica.	1881	49
ತ್ವಗ್ರೋಗಗಳು Skin Diseases.	1884	44
ದದ್ದು Ring worms.	1885	49
ದುರ್ಬಲತೆ Debility.	1879	41
ದುರ್ಮಾಂಸವುಳ್ಳ ಹುಣ್ಣುಗಳು Gangrenous Ulcers.	1878	48
ದೆಬ್ಬೆಗಳು Blows.	1880	46
ನಡುವಾಯು Lumbago.	1881	48
ನರಗಳ ಬಾವು Glandular Swellings.	1885	49
ನರವೇದನೆ Pains in the Muscles.	1885	50
ನಷ್ಟೇಂದ್ರಿಯ Spermatorrhœa.	1880	35
ನಳವಾಯು Colic.	1880	38
ನಾಯಿಕೆಮ್ಮು Hooping Cough.	1881	54
ನಾಲಿಗೆ ಒಡಿಯೋಣ, ಬಿಳಿ ಹುಣ್ಣು ಆಗೋಣ Fissures or Cracks of the Togue	1885	50
ನಾವಿಳರ ರಕ್ತಪಿತ್ತ Scurvy.	1885	50
ನಿಚ್ಚು Heartburn.	1881	43
ನಿದ್ರೆಗೇಡು Sleeplessness.	1886	41
ನೀರುಮೆದುಳು Water on the Brain.	1884	54
ನೆಗಡಿ Catarrh.	1885	51
ನೆಗಡಿ, ಕಠಿಣ ತರದ್ದು Influenza.	1885	52
ನೆಗಡಿ (ಶ್ವಾಸನಾಳಕ್ಕೆ ತಟ್ಟುವಂಥಾದ್ದು) Croup.	1885	52
ನೆತ್ತರಗಡ್ಡೆ Boil.	1882	59
ನೆತ್ತರಹರಿಯೋಣ Hæmmorrhage.	1877	19
ನೇಪಾಳ ಬೀಜದ ವಿಷಕ್ಕೆ Poisoning by Croton Seed.	1881	49
ನೇವಸ Asthma.	1880	40
ನೋವಿನ ಗಡ್ಡೆ Painful Tumours.	1885	53
ನೋವುಳ್ಳ ಕರಳುಗಳ ವ್ಯಾಧಿ Painful Affections of Bowels.	1881	44
ಪಾದರಸದ ವಿಷ Poisoning by Mercury.	1879	38
ಪಾರ್ಶ್ವತೂಲೆ Affections of the Liver.	1882	44
ಪಾಷಾಣದ ವಿಷಕ್ಕೆ Poisoning by Arsenic.	1885	45
ಪಿತ್ತಕಲ್ಲು Gall Stone.	1879	42
ಪೆಟ್ಟುಗಳು Blows.	1884	46
ಪ್ರಮೇಹ Gonorrhœa.	1885	57
ಪ್ರಲಾಪಸನ್ನಿ Epilepsy, Convulsions in Adults. 1878, 44.	1886	42
ಪ್ರಸವವೇದನೆ Labour.	1886	43
ಪ್ಲೀಹೋದರ Enlargement of the Spleen.	1880	37
ಬಲಹೀನತ್ವ Debility, Weakness.	1879	41
ಬವಳಿ Fainting.	1881	50
ಬಹುಮೂತ್ರ Diabetes.	1886	45
ಬಳ್ಳಿ Dysentery.	1879	45

	ಇಸವಿ:	ಪುಟ:
ಬಾಯಿನೋವು Faceache.	1886	45
ಹರಿವಾತ Tic Douloureux.	1886	45
ಬಾಯಿಹುಣ್ಣು Sore Mouth.	1879	50
ಬಾಲಗ್ರಹ Convulsions of Children.	1886	46
ಬಾಲಪೀಡೆ Rickets.	1882	57
ಮಕ್ಕಳ ಅಪಸ್ಮಾರ Convulsions of Children.	1886	46
ಬಾವು Abscess.	1886	48
ಬಿಕ್ಕು ಹಿಡಿಯೋಣ Hiccup.	1886	49
ಬಿಡದೆ ಬರುವ ಜ್ವರ Continued Fever.	1885	43
ಬಿಸಿಲುಮೂರ್ಛೆ, ಬಿಸಿಲುಹೊಡ್ತ Coup-de-Soleil, Sunstroke.	1877	23
ಬೀಗು Inflammation, Abscess.	1880	43
	1886	48
ಬ್ಲಿಸ್ತರ್ ಎಂಬ ಚಳ್ಳೆ ಎಬ್ಬಿಸುವಿಕೆ Blister.	1883	47
ಬೆಂದ ಹುಣ್ಣು Burns and Scalds.	1886	50
ಬೆವರುಸಾಲೆ Prickly Heat.	1886	50
ಬೊಗುಳುಸನ್ನಿ Epilespy, Convulsions.	1886	42
ಬೋಧ ತಪ್ಪುವದು Delirium Tremens. 1876, 31.	1886	49
ಬೋಳುತಲೆ Baldness.	1886	51
ಭಗಂದರ Carbuncle.	1878	48
ಮಂದಸನ್ನಿ Convulsions in Adults.	1886	42
ಮಕ್ಕಳ ಅಶಕ್ತಿ Debility of Children.	1886	51
ಮದಕರಿರೋಗ Leprosy.	1879	52
" "	1883	41
ಮಲಕಟ್ಟು, ಮಲಬದ್ಧತೆ Constipation.	1886	52
ಮಲೆಜ್ವರ Jungle Fever.	1884	43
ಮಸುಳು Scurf in the Head.	1885	46
ಮಾಂಸಗ್ರಂಥಿ ಉಬ್ಬೋಣ Enlarged Glands.	1886	53
ಮೂಗಿನಿಂಚೆ ನೆತ್ತರು ಮುಂತಾದ್ದು ಹರಿಯೋಣ Hæmorrhage, etc. from the Nose.	1886	53
ಮೂತ್ರಕೃಚ್ಛ್ರ Scalding on passing Urine.	1886	54
ಮೂರ್ಛೆ Fainting. 1881, 50.	1886	49
ಮೂಲವ್ಯಾಧಿ Piles.	1886	55
ಮೆದುಳಿನಲ್ಲಿ ನೀರು ಹುಟ್ಟುವದು Water on the Brain.	1884	54
ಮೈಕೆಂಪಾಗುವ ಜ್ವರ Scarletina, Scarlet Fever.	1885	41
ಮೈಗರೆಯುವದು Atrophy.	1883	44
ಮೈಗಾಪು Swelling.	1880	48
ಮೈಯಿಳಿಯೋಣ Abortion.	1883	57
ಮೈಲಗಜ್ಜ Small-pox.	1887	42,56
ಮೈಸೊಕ್ಕು Fainting	1881	50
ಮೊಡವೆಗಳು Painful Nodes.	1885	53
ಮೊಣಕಾಲುಗಂಟಿನ ಬಾವು Enlargement of the Knee Joint.	1882	50
ಮೊಲೆತುದಿಯ ಹುಣ್ಣು, —ಬಿರುಕು Sore or Cracked Nipples.	1882	56
ಮೊಲೆಹಾಲು ವೃದ್ಧಿಗೆ For Increasing the Secretion of Milk.	1887	47
ಮೊಳೆರೋಗ Piles.	1886	55
ರಕ್ತದ ಕೊರತೆ Anaemia.	1883	44
ರಕ್ತಕಾರುವದು Hemoptysis.	೪೭77	19
ರಕ್ತಪಿತ್ತ Hæmorrhage from the Internal Organs.	1877	19
ರಕ್ತಹರಿಯೋಣದರಿಂದ ಕ್ಷೀಣತೆ Exhaution from Hæmorrhage.	1887	48
ರಕ್ತಾತಿಸಾರ Dysentery.	1879	45
ರಸಕರ್ಪೂರದ ವಿಷಕ್ಕೆ Poisoning by Corrosive Sublimate.	1879	38
ರಾಜಕುರು Carbuncle.	1878	48
ರಾಜಹುಣ್ಣು Scrofula.	1883	54
ರಾಜಕ್ಷಯ Pulmonary Consumption.	1887	49
ರುದ್ರವಾಯು Apoplexy.	1877	22
ಲಿಂಗೇಂದ್ರಿಯದುರಿ Irritation of the Genital Organs.	1882	46
ವತ್ಸನಾಭಿಯ ವಿಷಕ್ಕೆ Poisoning with Bish (Aconite Root).	1887	42
ವರಿಶೇಜ್ವರ Ague.	1884	48
ವಟ್ಟ Convulsions in Adults.	1886	42
ವಸಡಿನ ಹುಣ್ಣು Ulceration of Gums.	1879	50
ವಸಡು ಮೆತ್ತಗಾಗೋಣ Sponginess of Gums.	1879	50
ವಾಂತಿ Vomiting.	1887	51
ವಾಂತಿಭೇದಿ, ವಾಂತಿಭ್ರಾಂತಿ Cholera.	1877	26
ವಾತ (ಪ್ರಾರಂಭ ಸ್ಥಿತಿದು) Acute Rheumatism.	1887	52
ವಾತ (ದೀರ್ಘಕಾಲದ್ದು) Chronic Rheumatism.	1882	53
ವಾತ (ಆಂತರಾಯಾಮ) Chorea.	1876	25
ವಾತಕಾಲು Elephantiasis.	1887	54

	ಇಸವಿ:	ಪುಟ:
ವಾಯು Flatulence.	1880	38
ವಾಯುವಿನ ಉದರಶೂಲೆ Flatulent Colic.	1882	48
ವಿರೇಚನ ಕಾಯಿಯ ವಿಷಕ್ಕೆ Poisoning by Physic Nut.	1887	49
ವಿಷಜಂತುಗಳು ಕಚ್ಚಿದ್ದಕ್ಕೆ Stings of Reptiles.	1881	50
ವಿಷಮಜ್ವರ Remittent Fever.	1884	48
ವ್ರಣ Ulcer.	1882	50
ಶಂಖಪಾಷಾಣದ ವಿಷಕ್ಕೆ Poisoning with Arsenic.	1888	41
ಶಿಡುಬು Small-pox.	1887	42,56
ಶೀತ Cold.	1885	51
ಶೀತಜ್ವರ Ague.	1884	48
ಶೈಯವ್ರಣ[illegible]ed Sores.	1887	55
ಶೋಫ ಯಾನೆ ಬೀಗು Dropsy.	1884	54
ಶ್ರೋಣಿತವಾತ Rheumatism.	1887	52, 53
ಶ್ಲೇಷ್ಮಕಟ್ಟು Hoarseness.	1888	42
ಶ್ವಾಸಕೋಶದ ರೋಗಗಳು Affections of Lungs. 1877, 20.	1883	46
ಶ್ವಾಸಕಟ್ಟು, ಶ್ವಾಸಬದ್ಧತೆ Difficulty of Breathing.	1888	43
ಸಂದುಬಾವು Enlargement of Joints.	1882	50
ಸಂದುವಾತ Lock-jaw.	1888	44
ಸರ್ಪ ಕಚ್ಚಿದ್ದಕ್ಕೆ Snakebite.	1888	45
ಸುಟ್ಟಗುಳ್ಳೆ Burns and Scalds.	1886	50
ಸುಣ್ಣದ ರವೆ ಕಣ್ಣಿನಲ್ಲಿ ಬಿದ್ದದ್ದಕ್ಕೆ Particles of Lime in the Eyes.	1888	46
ಸೂತಕದ ಅಕ್ರಮ Menstrual Irregularity.	1876	24
ಸೂತಕಬದ್ಧ Suspension of Menstrual Discharge.	1876	24
ಸೂತಿಕಾವಾಯು, ಸೂತಿಕಾಸನ್ನಿ Hysterical Affections.	1883	56
ಸೊಂಟದ ಹಿಂಭಾಗದ ನೋವು Sciatica.	1881	49
ಸೊಂಟವಾತ Lumbago, Pain in the Loins.	1881	48
ಸೊಳ್ಳೆ ಕಚ್ಚಿದ್ದಕ್ಕೆ Mosquito Bite.	1888	46
ಸ್ತನದ ತುದಿಯ ಹುಣ್ಣು, ಭಾಯ Sore or Cracked Nipples.	1882	56
ಸ್ಮರಣೆ ತಪ್ಪುವದು Delirium.	1876	31
ಸ್ವಯಥು ಎಂಬ ದಾವು Painful Tumours.	1885	53
ಸ್ವಯ ತಪ್ಪುವಿಕೆ Insensiblity.	1888	47
ಸ್ವರಭಂಗ Hoarseness.	1888	47
ಹಲವಿಳಿಯೋಣ Abortion.	1883	57
ಹರಳೆಣ್ಣೇ ಬೀಜದ ವಿಷಕ್ಕೆ Poisoning by Castor Oil-seed.	1888	47
ಹರಿವಾತ Neuralgia.	1886	45
ಹಲ್ಲಿನಲ್ಲಿರುವ ಟಾರ್ಟರ್ ಎಂಬ ಸುಣ್ಣ ತೆಗೆಯಲಿಕ್ಕೆ To remove Tartar from the Teeth.	1888	47
ಹಲ್ಲುನೋವು Toothache.	1888	47
ಹಸಿವೆಗೆಡುವದು Loss of Appetite.	1877	18
ಹಳ್ಳಿರೋಗ Rickets.	1882	57
ಹುಚ್ಚು Insanity.	1888	48
ಹುಣ್ಣು Ulcer.	1882	50
ಹುಣ್ಣುಗಳು (ಸುಟ್ಟ) Burns.	1886	50
ಹುಳಿದ್ರವಗಳ ವಿಷ Poisoning with Acids.	1888	49
ಹುಳಿವು (ಅನ್ನಕೋಶದ) Acidity of the Stomach.	1876	30
ಹೇನುಗಳ ಕಾಟ Lice infesting the various Parts of the Body.	1888	49
ಹೊಟ್ಟೆ ಝಾಡಿಸುವದು Looseness of the Bowels.	1876	32
ಹೊಟ್ಟೆನೋವು Colic.	1880	38
ಹೊಟ್ಟೆಯಿಳಿಯೋಣ Abortion.	1883	57
ಹೊಟ್ಟೆಹುಳ Worms.	1883	50
ಕ್ಷಯರೋಗ Consumption.	1888	50
ಕ್ಷೀಪ್ರಸನ್ನಿ Apoplexy.	1877	22
ಕ್ಷುದ್ರಮಸೂರಿ Measles.	1884	46
ಕ್ಷುಧಾಹೀನತೆ Want of Appetite.	1877	18

ಹೊಸ ವರ್ಷದ ಗೀತ.

ಆರ್ಯಸಭ್ಯೆ.

ಸರ್ವೇಶ್ವರನಹ ದೇವರ ದಯದಿಂ ।
ಸರ್ವಜಿತಾಖ್ಯಾಬುದ ಗಮಿಸೇ ।
ಊರ್ವಿಯೊಳಗೆ ನವ ವರುಷಾರಂಭವು ।
ಸರ್ವಧಾನಿಯುದಯಿಸಿತೈಸೇ ॥
ಪೂರ್ವಾಯನದಾರಂಭದೊಳಿಹ ಪ್ರಿಯ- ।
ರೊರ್ವೋರ್ವರ ಗತಿಗಳನೆಣಿಸೇ ।
ಪರ್ವಿಪುದಾಶ್ಚರ್ಯವು ತತ್ಕಾರಣ ।
ಗರ್ವ ವಿಸರ್ಜಿಸಲತಿಲೇಸೇ ॥ ೧ ॥

ಯೇನುಣ್ಣುವ ಯೇನುಡುವ ಯೆನುತ್ತನು- ।
ಮಾನದಿ ಬೀಳುತ ಬಳಲದಿರೀ ।
ಜಾಣರೆ ದೇವಕುಮಾರನ ವಾಕ್ಯವ ।
ಧ್ಯಾನಕೆ ತಂದರೆ ಸುಖಿಸುವಿರಿ ॥
ಕಾಣಲು ಬಾರದೆ ವಿಶ್ವದಿ ತೃಣವು ಪ್ರ- ।
ಸೂನ ಪಕ್ಷಿಕೀಟಗಳನ್ನೂ ।
ತಾನೊಂದೊಂದನೆ ರಕ್ಷಿಪನದರಿಂ ।
ಮಾನವರನು ಬಿಡುವನೆ ಯಿನ್ನು ॥ ೨ ॥

ಬೇರೊಂದ್ಯೋಜನೆ ಮುಖ್ಯವು ನಮ್ಮಯ ।
ಶಾರೀರಿಕದಿಂ ಮಿಗಿಲಾಗೀ ।
ಸಾರಲಾಭ ನಮ್ಮಾತುಮರಕ್ಷಣೆ ।
ಯಾರಿಂದಹುದೆಂಬುದಕಾಗೀ ॥
ಹಾರದಿರತ್ತಿತ್ತಲು ವರಮೋಕ್ಷಕೆ ।
ದಾರಿ ತಾನೆ ರಕ್ಷಕ ತಾನೆ ।
ಪಾರಮಾರ್ಥವಿದು ಮೆಸಿಯನೆ ಪಾಲಕ ।
ಭೂರಿ ಕರುಣೆಯಿಂದೊಲಿವವನೇ ॥ ೩ ॥

ಅಕುಟಿಲ ಭಾವದಿ ದೇವರ ವಾಕ್ಯದ ।
ಪ್ರಕಟಣೆಯನು ಪಠಿಸಲು ನಮಗೆ ।
ಸುಖಸಂತೋಷವನಿಹದಲಿ ಪಾಲಿಸಿ ।
ಮುಕುತಿರಾಜ್ಯವೀವನು ಕಡೆಗೆ ॥
ಭಕುತಿಯುಳ್ಳ ಪಠಕರಿಗೀ ವರುಷದಿ ।
ಸಕಲ ಕಂಟಕಾದ್ಯಡರುಗಳಾ ।
ಭಕುತನಾಥನೇ ಪರಿಹರಿಸುವನೈ ।
ಅಖಿಲೇಶ್ವರ ಯೇಹೋವ ಭಲಾ ॥ ೪ ॥

ಕವಿ: ಮೂಲ್ಕಿ ರಾಮಕೃಷ್ಣಯ್ಯ.

ದಕ್ಷಿಣ ಹಿಂದುಸ್ಥಾನದಲ್ಲಿ ರೂಢಿಯಾಗಿ ಎಣಿಸುವ

ಶಕಗಳ ಮೊಕಾಬಿಲೆ ಪಟ್ಟಿ.

ಕ್ರಿಸ್ತಶಕ A. D.		ಹಿಂದು ಶಕಗಳು				ಫಸಲಿ		ಮಹಮ್ಮದಿ ಹಿಜರಿ	
		ಚಾಂದ್ರಮಾನ		ಸೌರಮಾನ					
		ಸಂವತ್ಸರಗಳು	ಶಾಲಿವಾಹನ ಶಕ	ಮಲಯಾಳ ಕೊಲ್ಲಮ್					
1807	1867	ಪ್ರಭವ	1729	1789	982	1042	1216	1276	1222	1284
1808	1868	ವಿಭವ	1730	1790	983	1043	1217	1277	1223	1285
1809	1869	ಶುಕ್ಲ	1731	1791	984	1044	1218	1278	1224	1286
1810	1870	ಪ್ರಮೋದೂತ	1732	1792	985	1045	1219	1279	1225	1287
1811	1871	ಪ್ರಜೋತ್ಪತ್ತಿ	1733	1793	986	1046	1220	1280	1226	1288
1812	1872	ಆಂಗೀರಸ	1734	1794	987	1047	1221	1281	1227	1289
1813	1873	ಶ್ರೀಮುಖ	1735	1795	988	1048	1222	1282	1228-29	1290
1814	1874	ಭಾವ	1736	1796	989	1049	1223	1283	1230	1291
1815	1875	ಯುವ	1737	1797	990	1050	1224	1284	1231	1292
1816	1876	ಧಾತು	1738	1798	991	1051	1225	1285	1232	1293
1817	1877	ಈಶ್ವರ	1739	1799	992	1052	1226	1286	1233	1294-95
1818	1878	ಬಹುಧಾನ್ಯ	1740	1800	993	1053	1227	1287	1234	1296
1819	1879	ಪ್ರಮಾಥಿ	1741	1801	994	1054	1228	1288	1235	1297
1820	1880	ವಿಕ್ರಮ	1742	1802	995	1055	1229	1289	1236	1298
1821	1881	ವಿಷು	1743	1803	996	1056	1230	1290	1237	1299
1822	1882	ಚಿತ್ರಭಾನು	1744	1804	997	1057	1231	1291	1238	1300
1823	1883	ಸ್ವಭಾನು	1745	1805	998	1058	1232	1292	1239	1301
1824	1884	ತಾರಣ	1746	1806	999	1059	1233	1293	1240	1302
1825	1885	ಪಾರ್ಥಿವ	1747	1807	1000	1060	1234	1294	1241	1303
1826	1886	ವ್ಯಯ	1748	1808	1001	1061	1235	1295	1242	1304
1827	1887	ಸರ್ವಜಿತು	1749	1809	1002	1062	1236	1296	1243	1305
1828	1888	ಸರ್ವಧಾರಿ	1750	1810	1003	1063	1237	1297	1244	1306
1829	1889	ವಿರೋಧಿ	1751	1811	1004	1064	1238	1298	1245	1307
1830	1890	ವಿಕೃತಿ	1752	1812	1005	1065	1239	1299	1246	1308
1831	1891	ಖರ	1753	1813	1006	1066	1240	1300	1247	1309
1832	1892	ನಂದನ	1754	1814	1007	1067	1241	1301	1248	1310
1833	1893	ವಿಜಯ	1755	1815	1008	1068	1242	1302	1249	1311
1834	1894	ಜಯ	1756	1816	1009	1069	1243	1303	1250	1312

ಕ್ರಿಸ್ತಶಕ		ಸಂವತ್ಸರಗಳು	ಶಾಲಿವಾಹನ ಶಕ		ಮಲಯಾಳ ಕೊಲ್ಲಮ್		ಫಸಲಿ		ಮಹಮ್ಮದಿ ಹಿಜರಿ	
1835	1895	ಮನ್ಮಥ	1757	1817	1010	1070	1244	1304	1251	1313
1836	1896	ದುರ್ಮುಖಿ	1758	1818	1011	1071	1245	1305	1252	1314
1837	1897	ಹೇವಿಳಂಬಿ	1759	1819	1012	1072	1246	1306	1253	1315
1838	1898	ವಿಳಂಬಿ	1760	1820	1013	1073	1247	1307	1254	1316
1839	1899	ವಿಕಾರಿ	1761	1821	1014	1074	1248	1308	1255	1317
1840	1900	ಶಾರ್ವರಿ	1762	1822	1015	1075	1249	1309	1256	1318
1841	1901	ಪ್ಲವ	1763	1823	1016	1076	1250	1310	1257	1319
1842	1902	ಶುಭಕೃತು	1764	1824	1017	1077	1251	1311	1258	1320
1843	1903	ಶೋಭಕೃತು	1765	1825	1018	1078	1252	1312	1259	1321
1844	1904	ಕ್ರೋಧಿ	1766	1826	1019	1079	1253	1313	1260	1322
1845	1905	ವಿಶ್ವಾವಸು	1767	1827	1020	1080	1254	1314	1261-62	1323
1846	1906	ಪರಾಭವ	1768	1828	1021	1081	1255	1315	1263	1324
1847	1907	ಪ್ಲವಂಗ	1769	1829	1022	1082	1256	1316	1264	1325
1848	1908	ಕೀಲಕ	1770	1830	1023	1083	1257	1317	1265	1326
1849	1909	ಸೌಮ್ಯ	1771	1831	1024	1084	1258	1318	1266	1327-28
1850	1910	ಸಾಧಾರಣ	1772	1832	1025	1085	1259	1319	1267	1329
1851	1911	ವಿರೋಧಿಕೃತು	1773	1833	1026	1086	1260	1320	1268	1330
1852	1912	ಪರಿಧಾವಿ	1774	1834	1027	1087	1261	1321	1269	1331
1853	1913	ಪ್ರಮಾದೀಚ	1775	1835	1028	1088	1262	1322	1270	1332
1854	1914	ಆನಂದ	1776	1836	1029	1089	1263	1323	1271	1333
1855	1915	ರಾಕ್ಷಸ	1777	1837	1030	1090	1264	1324	1272	1334
1856	1916	ನಳ	1778	1838	1031	1091	1265	1325	1273	1335
1857	1917	ಪಿಂಗಳ	1779	1839	1032	1092	1266	1326	1274	1336
1858	1918	ಕಾಳಯುಕ್ತಿ	1780	1840	1033	1093	1267	1327	1275	1337
1859	1919	ಸಿದ್ಧಾರ್ಥಿ	1781	1841	1034	1094	1268	1328	1276	1338
1860	1920	ರೌದ್ರಿ	1782	1842	1035	1095	1269	1329	1277	1339
1861	1921	ದುರ್ಮತಿ	1783	1843	1036	1096	1270	1330	1278	1340
1862	1922	ದುಂದುಭಿ	1784	1844	1037	1097	1271	1331	1279	1341
1863	1923	ರುಧಿರೋದ್ಗಾರಿ	1785	1845	1038	1098	1272	1332	1280	1342
1864	1924	ರಕ್ತಾಕ್ಷಿ	1786	1846	1039	1099	1273	1333	1281	1343
1865	1925	ಕ್ರೋಧನ	1787	1847	1040	1100	1274	1334	1282	1344
1866	1926	ಕ್ಷಯ	1788	1848	1041	1101	1275	1335	1283	1345

ಸೂಚನೆ: 1. ಕ್ರಿಸ್ತಶಕವೆಂಬ ಇಸವಿ ಜನವರಿ 1ನೇ ತಾರೀಕಿಗೆ ಪ್ರಾರಂಭವಾಗುವದು.
2. ಸಂವತ್ಸರವೂ ಶಾಲಿವಾಹನ ಶಕವೂ (ಒಂದೇ ದಿವಸ) ಮಾರ್ಚ-ಏಪ್ರಿಲಲ್ಲಿ ಪ್ರಾರಂಭವಾಗುವದು
3. ಮಲಯಾಳ ಕೊಲ್ಲಮ್ ಎಂಬ ಕೇರಳ ಶಕವು ಸಪಟಂಬರ ತಿಂಗಳಲ್ಲಿ "
4. ಫಸಲಿ ಜುಲಾಯಿ 1ನೇ ತಾರೀಕಿಗೆ "
5. ಮಹಮ್ಮದಿ ಹಿಜರಿ ಸಾಮಾನ್ಯವಾಗಿ ವರ್ಷ ವರ್ಷ ೧೪ ದಿವಸಕ್ಕೆ ಮುಂದಾಗಿ "

ದೇವರನ್ನು ಅರಿಯುವದು.

ಸ್ವಲ್ಪ ಕಡಿಮೆ ನಾಲ್ವತ್ತು ವರ್ಷಗಳ ಹಿಂದೆ ಜರ್ಮನ ದೇಶದಲ್ಲಿ ರೈನ ನದಿಯ ದಂಡೆಯ ಬಳಿಯೆಲ್ಲಿರುವ ಒಂದು ಊರಿನಲ್ಲಿ ಬೇರನ ಎಂಬವನೊಬ್ಬ ಮುದುಕ ಗೃಹಸ್ಥನಿರುತ್ತಿದ್ದನು. ಇವನಿಗೆ ಇದ್ದ ಒಬ್ಬನೇ ಮಗನು ತಾಯಿತಂದೆಗಳಿಗೂ ಸೇವಕರಿಗೂ ಅತಿಪ್ರಿಯನಾಗಿದ್ದನು. ಒಂದು ದಿನ ಮಗನು ಹೊರಗೆ ಹೋದ ವೇಳೆಯಲ್ಲಿ ಒಬ್ಬ ಫ್ರೆಂಚ ಮನುಷ್ಯನು ಆ ಮುದುಕನ ಭೇಟಿಗೆ ಬಂದನು. ಈ ಫ್ರೆಂಚನು ದೇವರ ವಿಷಯದಲ್ಲಿ ಆಡಿದ ಆಯಾ ಮಾತುಗಳನ್ನು ಕೇಳಿ ಮುದುಕನು ಕೋಪಗೊಂಡು ಹೇಳಿದನು: ಸರ್ವಸಮರ್ಥನಾದ ದೇವರಿಗೆ ಈ ರೀತಿಯಲ್ಲಿ ಅಪಮಾನ ಮಾಡುವದಕ್ಕೆ ನಿಮಗೆ ಭಯವಾಗುವದಿಲ್ಲವೋ? ಫ್ರೆಂಚನು—ದೇವರ ವಿಷಯದಲ್ಲಿ ನಾನೇನೂ ಅರಿಯೆ, ನಾನು ಅವನನ್ನು ನೋಡಲಿಲ್ಲಾ ಎಂದನ್ನಲು, ಮುದುಕನು ಉತ್ತರ ಕೊಡದೆ ಸುಮ್ಮನಿದ್ದನು. ಮಾರಣೆ ದಿನ ಮುದುಕನು ಅವನಿಗೆ ಗೋಡೆಯ ಮೇಲಿರುವ ಒಂದು ಚಿತ್ರ ತೋರಿಸಿ, ಈ ನಕ್ಷೆ ನನ್ನ ಮಗನು ಮಾಡಿದ್ದು ಅನ್ನಲು, ಫ್ರೆಂಚನು—ಶಾಭಾಸು, ನಿಮ್ಮ ಮಗನು ಬಹಳ ಘಟ್ಟಿಗನಿದ್ದಾನೆ, ಅಂದನು. ಬಳಿಕ ಮುದುಕನು ಫ್ರೆಂಚ ಮನುಷ್ಯನನ್ನು ಕೈ ಪಿಡಿದು ತೋಟಕ್ಕೆ ಕರಕೊಂಡು ಹೋಗಿ ನಾನಾ ಗಿಡಗಳನ್ನು ತೋರಿಸಲು, ಫ್ರೆಂಚನು ಅಲ್ಲಿ ಒಳ್ಳೇ ಕ್ರಮವನ್ನು ನೋಡಿ, ಈ ತೋಟದ ಪಾರುಪತ್ಯ ನೋಡುವವರು ಯಾರು? ಎಂದು ಕೇಳಲು, ಮುದುಕನು, ನನ್ನ ಮಗ ನೋಡುತ್ತಾನೆ, ಎಲ್ಲಾ ಗಿಡಮೂಲಿಕೆಗಳ ಗುಣಧರ್ಮವು ಅವನು ಚನ್ನಾಗಿ ಬಲ್ಲನು, ಅಂದನು. ಫ್ರೆಂಚನು, ಹೌದೋ, ನಿಮ್ಮ ಮಗನು ಮಹಾ ವಿದ್ವಾಂಸನೇ ಸರಿ ಅಂತ ಅಂದನು. ಅಲ್ಲಿಂದ ಅವರಿಬ್ಬರೂ ಊರೊಳಗೆ ಹೋದರು. ದಾರಿಯಲ್ಲಿ ಚಿಕ್ಕದೊಂದು ಆಯಕಟ್ಟಾದ ಮನೆಯನ್ನು ತೋರಿಸಿ ಮುದುಕನು ಹೇಳಿದ್ದು: ಇದರಲ್ಲಿರುವ ಅನಾಥ ಮಕ್ಕಳ ಪಾಲನೆಗಾಗಿಯೂ ಶಿಕ್ಷಣೆಗಾಗಿಯೂ ನನ್ನ ಮಗನು ಸ್ವಂತ ಹಣದಿಂದ ಈ ಮನೆಯನ್ನು ಕಟ್ಟಿಸಿದ್ದಾನೆ. ಹಾಗೆ ಅಡ್ಡಾಡ್ಯಾಡಿ ಮನೆಯ ಕಡೆಗೆ ಬರುವಾಗ ಫ್ರೆಂಚನು— ಅಯ್ಯಾ, ನಿಮಗೆ ಒಳ್ಳೇ ಮಗನು ಶಿಕ್ಕಿದ್ದಾನೆ, ಅಂದನು. ಮುದುಕ—ನನ್ನ ಮಗನು ಒಳ್ಳೆಯವನೆಂದು ನಿಮಗೆ ಹ್ಯಾಗೆ ತಿಳಿಯಿತು?

ಫ್ರೆಂಚನು—ನೀವು ನನಗೆ ತೋರಿಸಿದ್ದೆಲ್ಲಾ ಅವನೇ ಮಾಡಿದವನಾದರೆ, ಬಹಳ ಚತುರನೇ ಸೈ. ಮುದುಕ—ಆದರೆ ನೀವು ಅವನನ್ನು ನೋಡಲಿಲ್ಲವಲ್ಲಾ? ಫ್ರೆಂಚನು—ನೋಡಲಿಲ್ಲಾ, ಖರೆ; ಆದರೆ ಅವನ ಕೃತ್ಯಗಳನ್ನು ಕಂಡು, ಅವನು ಯಾವ ಪ್ರಕಾರದ ಮನುಷ್ಯನೆಂಬದು ನಾನು ತಿಳುಕೊಂಡೆ. ಮುದುಕ—ಹಾಗೋ? ಇಲ್ಲಿಗೆ ಬನ್ನಿ; ಕಿಟಕಿಯ ಬಳಿಯಲ್ಲಿ ನಿಂತು ಆಚೆ ದೃಷ್ಟಿ ಇಟ್ಟು ಏನೇನು ಕಾಣುತ್ತದೋ ನೋಡಿ! ಫ್ರೆಂಚನು ಕಿಟಕಿಯ ಹತ್ತರ ನಿಂತು ಹೇಳುತ್ತಾನೆ—ಸೂರ್ಯನು ಮಹಾ ಪ್ರಕಾಶಮಾನನಾಗಿ ಹೊಳಿಯುತ್ತಾನೆ, ರೈನ ಹೊಳೆಯು ದಂಡೆಯ ಪ್ರದೇಶವು ಮಹಾ ಸುಂದರವಾಗಿ ತೋರುತ್ತದೆ; ಸಾವಿರಾರು ತೋಟಗಳು, ದ್ರಾಕ್ಷೆಹಿತ್ತಲು, ಹೊಲಗಳು, ಬೇಣೆಯಲ್ಲಿ ಮೇಯುವ ದನಕರಗಳು, ಆಡುಕುರಿಗಳು, ಇವೆಲ್ಲಾ ಕಾಣುತ್ತವೆ. ಮುದುಕ—ಹಾಗೋ? ನನ್ನ ಮಗನು ಮಾಡಿದ ಒಳ್ಳೇ ಕೃತ್ಯಗಳನ್ನು ನೋಡಿ ಅವನು ಮಹಾ ಒಳ್ಳೆಯವನು ಎಂದು ನೀವು ತಿಳಿದಿರಲ್ಲಾ; ಹಾಗೆಯೇ ನಿಮ್ಮ ಮುಂದೆ ಪ್ರತ್ಯಕ್ಷವಾಗಿ ಕಾಣುವ ಅತ್ಯುತ್ತಮವಾದ ಆಶ್ಚರ್ಯವಾದ ಪದಾರ್ಥಗಳನ್ನು ನೋಡಿ ದೇವರ

ಮಹಿಮೆಯ ವಿಷಯದಲ್ಲಿ ಏನೂ ವಿಚಾರಗಳು ನಿಮ್ಮ ಮನಸ್ಸಿನಲ್ಲಿ ಬರುವದಿಲ್ಲವೋ? ದೇವರನ್ನು ನಾನರಿಯೆ ಎಂಬುವ ಮಾತು ಇನ್ನು ಮುಂದೆ ಅನ್ನ ಬೇಡಿರಿ; ಹಾಗೆ ಅನ್ನುವವನ ಮತಿ ಭ್ರಷ್ಟವಾಗಿದೆ ಎಂದು ಹೇಳ ಬೇಕಾಗುತ್ತದೆ.

ಲೋಕವು ಛತ್ರ.

ಆಸ್ಯಖಂಡದ ಮಧ್ಯದಲ್ಲಿರುವ ತಾರ್ತರಿ ಎಂಬುವ ದೇಶದಲ್ಲಿ ಒಬ್ಬ ಬಡ ಫಕೀರನಿದ್ದನು. ಅವನು ದೇಶಸಂಚಾರ ಮಾಡುವವನಾಗಿ ಜನರು ನೀಡುವ ಭಿಕ್ಷಾನ್ನವನ್ನುಂಡು ಸುಖಿಯಾಗಿರುತ್ತಿದ್ದನು. ಒಮ್ಮೆ ಅವನು ಅದೇ ದೇಶದ ಬಲ್ಖ ಎಂಬ ಪಟ್ಟಣಕ್ಕೆ ಬಂದು, ದೂರದಲ್ಲಿ ಅರಮನೆಯನ್ನು ಕಂಡು, ಅದೇ ಊರಿನ ಛತ್ರವೆಂದು ಮಾಡಿ ಅಲ್ಲಿಗೆ ಹೋಗಿ, ಸುತ್ತೂ ನೋಡಿ, ಒಳಹೊಕ್ಕು ತನ್ನ ಜೋಳಿಗೆ ಕೆಳಗಿಟ್ಟು ಕಂಬಳಿ ಹಾಕಿ ಕೂತುಕೊಂಡನು. ಬಹಳ ಹೊತ್ತು ಹೋಗಲಿಲ್ಲಾ, ಅಷ್ಟರೊಳಗೆ ಅರಮನೆಯ ಕಾವಲಿಯವರು ಬಂದು, "ನೀನ್ಯಾರು? ನಿನಗೆ ಇಲ್ಲಿ ಏನು ಕೆಲಸ"ವೆಂದು ಅಬ್ಬರಿಸಿದರು. "ನಾನು ಫಕೀರನು, ರಾತ್ರಿ ಈ ಛತ್ರದಲ್ಲಿ ಇಳುಕೊಳ್ಳುತ್ತೇನೆ" ಎಂದು ಫಕೀರನು ಅಂದನು. ಕಾವಲಿಯವರು ಅವನನ್ನು ಬೆದರಿಸಿ, "ಇದು ಛತ್ರವಲ್ಲ, ಅರಮನೆ ಎಂದು ನಿನಗೆ ಕಾಣುವದಿಲ್ಲವೋ? ಎದ್ದು ನಡಿ" ಎಂದು ಅವನ ಜೋಳಿಗೆಯನ್ನು ಎತ್ತಿ ಒತ್ತ ಬಿಸಾಡಲಿಕ್ಕಿರುವಾಗ, ಅವರಿಗೂ ಇವನಿಗೂ ವಾಗ್ವಾದವಾಗುವದನ್ನು ಕೇಳಿ ಅಮೀರನು ತಾನೇ ಅಕಸ್ಮಾತ್ತಾಗಿ ಅಲ್ಲಿಗೆ ಬಂದನು. ಆವಾಗ್ಯೆ ಫಕೀರನನ್ನು ನೋಡಿ ಅವನ ಭೋಳೆತನಕ್ಕೆ ನಕ್ಕು, "ಇದು ಅರಮನೆಯೋ ಛತ್ರವೋ ಎಂದು ತಿಳಿಯಲಾರದವನು ನೀನು ಎಂಥಾ ಹೆಡ್ಡ!" ಎಂದು ವಿಚಾರಿಸಿದನು. ಆ ಫಕೀರನು ಬಹು ದೈನ್ಯದಿಂದ ಹೇಳುತ್ತಾನೆ: "ಮಹಾಸ್ವಾಮಿ, ತಮ್ಮ ಹತ್ತರ ಕೆಲವು ಪ್ರಶ್ನೆ ಮಾಡುವದಕ್ಕೆ ಅಪ್ಪಣೆಯಾಗಬೇಕು. ಈ ಮನೆ ಕಟ್ಟಿದ ಮೊದಲಿನಲ್ಲಿ ಇದರಲ್ಲಿ ವಸ್ತಿ ಮಾಡಿದವರು ಯಾರು?" ಅರಸನು— "ನನ್ನ ಹಿರಿಯರು." ಫಕೀರನು—"ತಮಗೆ ಮೊದಲು ಇದರಲ್ಲಿ ವಸ್ತಿ ಮಾಡಿದವರು ಯಾರು?" ಅರಸನು—"ನನ್ನ ತಂದೆಯವರು." ಫಕೀರನು—"ಈಗ ಸದ್ಯಾ ಇದರಲ್ಲಿ ಇರುವವರು ಯಾರು?" ಅರಸನು—"ನಾನೇ." ಫಕೀರನು—"ತಮ್ಮ ಅನಂತರ ಇದರಲ್ಲಿ ಇರತಕ್ಕವರು ಯಾರು?" ಅರಸನು—"ನನ್ನ ಮಗ ಯುವರಾಜನು." ಫಕೀರನು—"ಮಹಾರಾಜರೇ, ಇಷ್ಟು ಸರ್ತಿ ವಕ್ಕಲುಗಳನ್ನು ಬದಲಿಸುತ್ತಾ ಬಂದ ಈ ಮನೆ ಛತ್ರವಲ್ಲದೆ ಅರಮನೆಯಲ್ಲಾ, ಒಬ್ಬರ ಹಿಂದೆ ಒಬ್ಬರು ಇದರಲ್ಲಿ ಬಂದು ಉಳುಕೊಂಡು ಇಲ್ಲಿಂದ ತೆರಳಿ ಹೋದ ಮೇಲೆ ಇದು ಯಾರಿಗೂ ಶಾಶ್ವತವಲ್ಲಾ ಎಂತ ತಿಳಿಯಿರಿ" ಎಂದು ಹೇಳಿದನು.

ಈ ಲೋಕದಲ್ಲಿ ಸರ್ವೇ ಮನುಷ್ಯರು ಪ್ರಯಾಣಿಕರೇ, ಸ್ಥಿರಂಜೀವಿಗಳಲ್ಲಾ, ನಿತ್ಯವಾದ ಇಕ್ಕೆಯು ಆ ಲೋಕದಲ್ಲಿ ಅದೆ ಎಂಬುವದು ಅರಿಯದವರ್ಯಾರು? ಇದು ಎಲ್ಲವರಿಗೂ ಗೊತ್ತಿರುವಂಥಾ ಮಾತು ಖರೆ; ಆದಾಗ್ಯೂ ಈ ಸಂಗತಿ ಚಿತ್ತಕ್ಕೆ ತರುವವರು ವಿರಳರು. ಒಂದು ವೇಳೆ ಗ್ರಹಿಕೆಗೆ ತಂದಾಗ್ಯೂ ಮುಂದಣ ಗತಿಯನ್ನು ಕುರಿತು ಅವರಿಗೇನೂ ಗೊತ್ತಿಲ್ಲಾ. ನನಗೆ ಅಲ್ಲಿ ಸದ್ಗತಿಯೋ ಮರ್ಗತಿಯೋ ಯಾರು ಬಲ್ಲ? ಅಲ್ಲಿಗೆ ಹೋಗಿ ಕಂಡು ಬಂದವರು ಯಾರಿದ್ದಾರೆ? ಎಂತ ಹಲವರೂ, ವಿಧಿ ಬೆನ್ನ ಬಿಡದು, ಈ ಜನ್ಮ ತಪ್ಪಿದ ಮೇಲೆ ಚತುರಶೀತಿಲಕ್ಷಯೋನಿಗಳನ್ನು ಸುಳಿಯದೆ ಕಳಿಯುವದುಂಟೇ ಎಂತ ಹಲವರೂ ಹೇಳು

ವರು. ಏವಂಚ ದೇವರನ್ನರಿಯದ ಜನಾಂಗಗಳು ಈ ಲೋಕದಲ್ಲಿ ಮುಂದಣ ಸೌಭಾಗ್ಯದ ನಿರೀಕ್ಷೆಯಿಲ್ಲದವರೂ, ದೇವರಿಲ್ಲದವರೂ, ಮಹಾ ದುರವಸ್ಥೆಯಲ್ಲಿರುವವರೂ ಎಂತ ಸದ್ವೇದ ದಲ್ಲಿ ಹೇಳಿರುವದು ನಿಜವೇ. ಎಲ್ಲವರೂ ಇಲ್ಲಿ ಬಿಡಾರದವರು ಎಂಬುವದು ಬದ್ಧವಾದ ಮೇಲೆ, ಬಿಡಾರದಿಂದ ತೆರಳಿ ಹೋಗುವ ಕಾಲ ಬಂದಾಗ, ತನಗೆ ಪರಲೋಕದಲ್ಲಿ, ದೇವರ ಸನ್ನಿಧಾನದಲ್ಲಿ, ನಿತ್ಯಾನಂದಪದವಿಗೆ ಹಕ್ಕು ಉಂಟಾಗುವಂತೆ ಶತಪ್ರಯತ್ನ ಮಾಡ ಬೇಕು. ಯಾವನು ಈ ಪ್ರಯತ್ನ ಮಾಡುವದನ್ನು ಬಿಟ್ಟು ಇಹವನ್ನೇ ಸ್ವರ್ಗ ಮಾಡಿಕೊಳ್ಳುವದಕ್ಕೆ ನೋಡುತ್ತಾನೋ ಅವನೇ ಬುದ್ಧಿಶೂನ್ಯನು.

ಹಾಗಾದರೆ ಪರಲೋಕರಾಜ್ಯದಲ್ಲಿ ನಮಗೆ ನಿತ್ಯವಾಗಿರುವ ಮನೆಯನ್ನುಂಟು ಮಾಡಿ ಕೊಳ್ಳುವದು ಹ್ಯಾಗೆ? ಇದಕ್ಕೆ ದೇವರ ವಾಕ್ಯವು ಹೇಳುವದನ್ನು ಕೇಳೋಣ. ಕೇವಲ ಮನುಷ್ಯಜ್ಞಾನವು ಪಾರಲೌಕಿಕ ಗೋಷ್ಠಿಯನ್ನು ಗ್ರಹಿಸಲಾರದು. "ಪರಲೋಕದಲ್ಲಿರುವ ನನ್ನ ತಂದೆಯ ಚಿತ್ತವನ್ನು ಮಾಡುವವನೇ ಪರಲೋಕರಾಜ್ಯದಲ್ಲಿ ಪ್ರವೇಶಿಸುವನು." ಇದೇ ದೇವರ ವಾಕ್ಯ. ಪರಲೋಕದಲ್ಲಿರುವ ತಂದೆ ಅಂದರೆ ಯಾವಾತನು? ನಮ್ಮ ನಿರ್ಮಾಣಕರ್ತನಾದ ದೇವರು. ಆತನ ಚಿತ್ತವು ಏನು? ಅದನ್ನು ಮಾಡುವದು ಅಂದರೇನು? ಒಂದೇ ಮಾತಿನಲ್ಲಿ ಹೇಳಿದರೆ, ಆತನ ಕುಮಾರನಾದ ಯೇಸು ಕ್ರಿಸ್ತನಲ್ಲಿ ವಿಶ್ವಾಸವಿಡುವದು. ತಾನೇ ಮಾರ್ಗವೂ ಸತ್ಯವೂ ಜೀವವೂ ಆಗಿದ್ದೇನೆ; ತನ್ನ ಮುಖಾಂತರವಲ್ಲದೆ, ತಂದೆಯ ಬಳಿಗೆ ಅಂದರೆ ಪರಲೋಕರಾಜ್ಯಕ್ಕೆ ಯಾರೂ ಶೇರನೆಂದು ಆತನು ಹೇಳಿದನು; ಮತ್ತು ತನ್ನ ತಂದೆಯ ಮನೆಯಲ್ಲಿ ಅನೇಕ ವಾಸಸ್ಥಾನಗಳವೆ ಎಂತಲೂ ಆತನು ಹೇಳಿದ್ದಾನೆ. ಆದರೆ ನಮ್ಮ ಪಾಪಮಯ ಸ್ಥಿತಿಯನ್ನು ವಿಚಾರಿಸುವವರಾದರೆ, ನಾವು ದೇವರ ದಯೆಗೂ ಪರಲೋಕರಾಜ್ಯಕ್ಕೂ ಹಕ್ಕು ಇಲ್ಲದವರು. ದೇವರ ಅಪ್ಪಣೆಗಳನ್ನು ಮೀರಿದವರಾದ ಮೇಲೆ ದೇವರ ರಾಜ್ಯದ ಬಾಧ್ಯತೆಯನ್ನು ಕಳಕೊಂಡವರು. ಹಾಗಾದರೆ ಅಲ್ಲಿಯ ಹಕ್ಕು ಶಿಕ್ಷ ಬೇಕಾದರೆ, ಮಟ್ಟಮೊದಲು ನಮ್ಮ ಪಾಪಗಳ ಸಾಲವನ್ನು ನಾವೇ ತೀರಿಸ ಬೇಕು. ನಾವೇ ಪ್ರಾಯಶ್ಚಿತ್ತ ಮಾಡಿಕೊಳ್ಳ ಬೇಕು; ಅದು ನಮ್ಮಿಂದ ಆಗದಿದ್ದರೆ, ನಮ್ಮ ಪಾಪಸಾಲವನ್ನು ತೆತ್ತು ಪ್ರಾಯಶ್ಚಿತ್ತ ಮಾಡಿದವನ್ಯಾರಾದರೂ ಇದ್ದರೆ ಅವನ ಶರಣ ಹೋಗ ಬೇಕು ಅಲ್ಲದೆ ಬೇರೆ ಉಪಾಯವಿಲ್ಲಾ. ನಮ್ಮ ಪಾಪಗಳಿಗೆ ನಾವೇ ಪ್ರಾಯಶ್ಚಿತ್ತ ಮಾಡುವದು ನಮ್ಮಿಂದ ಆಗದಂಥಾದ್ದು, ನಾವು ದೇಹದಂಡಣೆ ತೀರ್ಥಯಾತ್ರೆ ದಾನಧರ್ಮ ತಪಶ್ಚರಣೆ ಮುಂತಾಗಿ ಮನುಷ್ಯ ಬುದ್ಧಿಗೆ ತೋರುವ ಉಪಾಯಗಳನ್ನೆಲ್ಲಾ ಸಾಹಸದಿಂದ ಮಾಡಿದಾಗ್ಯೂ ನಮ್ಮಿಂದ ಆಗದು ಎಂಬುವದು ಅನುಭವದ ಗೋಷ್ಠಿಯಾಗಿದೆ. ಆದದರಿಂದ ಯೇಸು ಕ್ರಿಸ್ತನು ಪರಲೋಕದಿಂದ ಈ ಲೋಕಕ್ಕೆ ಬಂದು ನಮ್ಮ ಪಾಪಗಳ ಸಲವಾಗಿ ನಿಷ್ಕೃತಿಯನ್ನು ಮಾಡಿದನು. ಪಾಪಗಳ ಪರಿಹಾರಕ್ಕೆ ಬೇರೆ ಮಾರ್ಗವಿರಲಿಲ್ಲಾ. ಈಗ ಯೇಸು ಕ್ರಿಸ್ತನ ಶರಣು ಹೊಕ್ಕವರಿಗೆ ದೇವರು ಸರ್ವೇ ಪಾಪಗಳನ್ನು ಕ್ಷಮೆ ಮಾಡುತ್ತಾನೆ. ಆದದರಿಂದ ಪಾಪಗಳ ಕ್ಷಮೆಯನ್ನು ಪಡಕೊಳ್ಳುವ ಬಗ್ಗೆ ಯಾವಾತನು ಸ್ವಭರವಸವನ್ನೆಲ್ಲಾ ಬಿಟ್ಟು ಬಿಟ್ಟು, ದೀನನಾಗಿ, ವಿಶ್ವಾಸಪೂರ್ವಕವಾಗಿ, ನೀನೇ ನನ್ನ ಹೊಣೆ, ನನ್ನ ಆಶ್ರಯವೆಂದು ಯೇಸು ಕ್ರಿಸ್ತನ ಬಳಿಗೆ ಬರುತ್ತಾನೋ, ಅವನೇ ದೇವರ ಚಿತ್ತವನ್ನು ಪೂರೈಸಿದವನು. ಮತ್ತು ದೇವರ ಚಿತ್ತವನ್ನು ಪೂರೈಸುವವನಿಗೆ ದೇವರ ರಾಜ್ಯದಲ್ಲಿ ಬಾಧ್ಯವೂ ಅದೆ.

ರಾಮನನ್ನು ಕುರಿತು ಸಂಭಾಷಣೆ.

ಒಬ್ಬಾನೊಬ್ಬ ಕ್ರಿಸ್ತೀಯ ಉಪದೇಶಕನು ಪೇಟೆಯಲ್ಲಿ ಪ್ರಸಂಗ ಮಾಡಿದ ಮೇಲೆ ಕೇಳು ವವರೊಳಗೆ ಒಬ್ಬ ಗೃಹಸ್ಥನು ಮುಂದೆ ಬಂದು ಪ್ರಶ್ನೆ ಮಾಡಿದನು.

ಹಿಂದು ಗೃಹಸ್ಥನು—ಈಹೊತ್ತು ನಿಮ್ಮ ಉಪದೇಶ ಠೀಕಾಯಿತು; ಆದರೆ ನೀವು ಹೇಳಿದ ಒಂದು ಸಂಗತಿ ನನ್ನ ಮನಸ್ಸಿಗೆ ಬರಲಿಲ್ಲಾ. ನೀವು ಯೇಸು ಕ್ರಿಸ್ತನನ್ನೇ ಹೊಗಳುತ್ತೀರಿ; ಅವನು ಹೊಗಳ ತಕ್ಕವನೇ ಖರೆ; ಆದರೆ ನಮ್ಮ ಶ್ರೀರಾಮಚಂದ್ರನೂ ಅವತಾರಪುರುಷನಾಗಿದ್ದನು. ಅವನು ಮಹಾ ಮಹಾ ಪರಾಕ್ರಮ ಮಾಡಿದ್ದಾನೆ. ಅವನು ಪಾಪಕೃತ್ಯ ಮಾಡಿದವನಲ್ಲಾ; ಈ ಮಾತಿಗೆ ನೀವೇನು ಹೇಳುತ್ತೀರಿ?

ಉಪದೇಶಕ—ವಾಲ್ಮೀಕಿರಾಮಾಯಣದಿಂದ ನಿಮಗೆ ಆಯಾ ದೃಷ್ಟಾಂತಗಳನ್ನು ಕೊಟ್ಟರೆ ಒಡಂಬಡುವಿರಲ್ಲಾ?

ಹಿಂದು—ರಾಮಾಯಣವು ಪ್ರಾಮಾಣಿಕ ಗ್ರಂಥವೆಂಬುವದು ನಿರ್ವಿವಾದ; ಅದರಲ್ಲಿ ಏನು ಹೇಳಿಯದೆ?

ಉಪದೇಶಕ—ಹಾಗಾದರೆ ಕೇಳಿ! ಅಯೋಧ್ಯಾಕಾಂಡದ ನಾಲ್ವತ್ತನೇ ಸರ್ಗದಲ್ಲಿ ಹೇಳಿರುವದು: ರಾಮನು ರಥದಲ್ಲಿ ಕೂತು ವನವಾಸಕ್ಕೆ ತೆರಳುವಾಗ ಅವನ ತಂದೆ ದಶರಥರಾಯನು ಹಿಂದಿನಿಂದ ಕರೆಯುತ್ತಾ, ರಥವನ್ನು ನಿಲ್ಲಿಸು ಎಂದು ಸಾರಥಿಗೆ ಕೂಗಿದನು. ಆವಾಗ ರಾಮನು ಸಾರಥಿಗೆ, ತಂದೆಯ ಕರೆಗೆ ಕಿವಿಕೊಡ ಬೇಡಾ; ರಥವನ್ನು ಹೊಡಿ; ನೀನು ತಿರುಗಿ ಬಂದ ಮೇಲೆ ತಂದೆ ನಿನ್ನನ್ನು ವಿಚಾರಿಸಿ, ಶಿಟ್ಟು ಮಾಡಿದ್ದಾದರೆ, ನೀವು ಕರೆದದ್ದು ನನಗೆ ಕೇಳಲೇ ಇಲ್ಲವೆಂದು ಅನ್ನು. ಈಗ ಈ ಉದಾಹರಣೆಯಿಂದ ನಿಮಗೇನು ತೋರುತ್ತದೆ? ಪರಿಶುದ್ಧ ದೇವರ ಅವತಾರವಾಗಿರುವವನು ಯಾರನ್ನಾದರೂ ಹುಸಿ ನುಡಿಯುವದಕ್ಕೆ ಪ್ರೇರಣೆ ಮಾಡುವನೋ? ನೀವೇ ಹೇಳಿ!

ಇನ್ನೊಂದು ಉದಾಹರಣೆ: ರಾಮನು ಭೂತ ವರ್ತಮಾನ ಭವಿಷ್ಯ ಬಲ್ಲವನಾಗಿ ಸರ್ವಜ್ಞನಾಗಿದ್ದನು ಎಂದನ್ನುತ್ತೀರಿ. ಈ ವಿಶೇಷಣವು ಅವನಿಗೆ ಶೋಭಿಸದು; ಯಾಕೆ ಅಂದರೆ: ರಾವಣನು ಬಂದು ಸೀತೆಯನ್ನು ತುಡುಕಿ ಪೈದಾಗ ಅವಳನ್ನು ಯಾರು ವೈದರು, ಎಲ್ಲಿಗೆ ವೈದರು, ಎಂಬುವದು ರಾಮನಿಗೆ ತಿಳಿಯದೆ ಹೋಯಿತು. ಅಷ್ಟೆ ಅಲ್ಲಾ, ಅವನು ಹುಚ್ಚನಂತೆ ಆಗಿ ಅವಳನ್ನು ಹುಡುಕುವವನಾದನು. ಒಂದೊಂದು ಮರವನ್ನು, ಪಕ್ಷಿಯನ್ನು, ಗುಡ್ಡವನ್ನು ಕುರಿತು, ನನ್ನ ಸೀತೆ ಎಲ್ಲಿಗೆ ಹೋದಳು ಎಂದು ನನಗೆ ಹೇಳಿರಿ ಎಂದು ಬೆಸಗೊಂಡನು. ಸರ್ವಜ್ಞನಾಗಿರುವವನು ಈ ಪ್ರಕಾರ ವಿಚಾರಿಸ ಬೇಕೋ?

ಸುಗ್ರೀವನೂ ವಾಲಿಯೂ ಕಾಳಗ ಮಾಡುತ್ತಿರುವಾಗ ಅವರಿಬ್ಬರ ಓರಗೆಯಿಂದ ಸುಗ್ರೀವನು ಯಾರು, ವಾಲಿ ಯಾರು, ಎಂತಾ ಅವನಿಗೆ ತಿಳಿಯಲಿಲ್ಲಾ. ಇಂಥಪ್ಪವನಿಗೆ ಸರ್ವಜ್ಞನೆಂಬ ವಿಶೇಷಣ ಒಪ್ಪುವದು ಹ್ಯಾಗೆ?

ಅರಣ್ಯಕಾಂಡದಲ್ಲಿ ಹೇಳಿರುವದು: ರಾಮನು ಸೀತೆಗಾಗಿ ಶೋಕ ಮಾಡುತ್ತಿರುವಾಗ ಲಕ್ಷ್ಮಣನು ಪ್ರೀತಿಯಿಂದ ಅವನನ್ನು ಸಮಾಧಾನ ಪಡಿಸುವದಕ್ಕೆ ಪ್ರಯತ್ನ ಮಾಡಿದ್ದೆಲ್ಲಾ ವ್ಯರ್ಥವಾಯಿತು; ರಾಮನು ಕೇವಲ ದುಃಖಾಕ್ರಾಂತನಾಗಿ, ತಾನು ಪೂರ್ವಜನ್ಮದಲ್ಲಿ ಮಹಾ

ಪಾತಕ ಮಾಡಿದವನಾಗಿರ ಬೇಕು, ಅದರ ನಿಮಿತ್ತ ಈ ದುಃಖವೆಂಬ ಗುಡ್ಡವು ತನ್ನ ಮೇಲೆ ಕುಸಿದು ಬಿದ್ದಂತಾಯಿತು, ಎಂದು ಹೇಳಿದನು. ಅವನು ದೇವರ ಅವತಾರವಾಗಿ ಸರ್ವಜ್ಞನಾಗಿದ್ದರೆ, ಪರಿಶುದ್ಧ ದೇವರಿಗೆ ಈ ರೀತ್ಯಾ ದೋಷ ಹೊರಿಸಿದ್ದು ಯಾತಕ್ಕೆ? ಸೀತೆಯನ್ನು ಯಾರಾದರೂ ಕದ್ದು ವೈದಿರ ಬಹುದು ಎಂದು ರಾಮನಿಗೆ ತಿಳಿದಾಗ ಅವನು ಮಹಾ ಕೋಪಾಯಮಾನನಾದನು. ಕೋಪೋದ್ರೇಕದಿಂದ ಅವನ ಕಣ್ಣು ಕೆಂಡಗಳಂತಾದವು. ಸೀತೆಯನ್ನು ತಂದು ಕೊಡದಿದ್ದರೆ, ಸೂರ್ಯನು ಅಸ್ತಮಾನವಾಗುವದರೊಳಗೆ ಸರ್ವೇ ದೇವತೆ ದೈತ್ಯ ಮನುಷ್ಯ ರಾಕ್ಷಸರನ್ನು, ಈ ಸಮಸ್ತ ಜಗತ್ತನ್ನೂ ಸಮೂಲನಾಶನ ಮಾಡುವೆನು ಎಂದು ಪ್ರತಿಜ್ಞೆ ಹಾಕಿಕೊಂಡನು. ಅರಣ್ಯಕಾಂಡ ಅಧ್ಯಾಯ ೬೪. ಇಂಥಾ ಕೋಪವು ದೇವರ ಅವತಾರವಾಗಿರುವವನಿಗೆ ಶೋಭಿಸುತ್ತದೋ? ಒಬ್ಬನ ಅಪರಾಧದ ದೆಶೆಯಿಂದ ನಿರಪರಾಧಿಗಳಾದ ಸರ್ವೇ ದೇವತೆಗಳನ್ನೂ ಮನುಷ್ಯರನ್ನೂ ಸಂಹಾರ ಮಾಡುವದಕ್ಕೆ ಸೊಂಟ ಕಟ್ಟಿಕೊಳ್ಳಬೇಕೋ? ಇದೆಂಥಾ ಅನ್ಯಾಯ? ಇನ್ನೂ ಇಂಥಾ ಉದಾಹರಣೆ ಬೇಕೋ? ರಾಮನೂ ಪರಶುರಾಮನೂ ಇಬ್ಬರೂ ವಿಷ್ಣುವಿನ ಅವತಾರಗಳಾಗಿರುತ್ತಿರಲಿಕ್ಕೆ ಅವರು ಒಬ್ಬರಿಗೊಬ್ಬರು ಭೇಟಿಯಾದಾಗ ಗುರುತು ತಿಳಿಯದೆ ಕದನಕ್ಕೆ ನಿಂತರೆಂದು ಬಾಲಕಾಂಡದಲ್ಲಿ ತೋರುತ್ತದೆ. ಮತ್ತು ರಾಮನು ತಾನು ದೇವರಲ್ಲಾ, ತನ್ನನ್ನು ದೇವರೆಂದು ಸಾಭಿಮಾನ ಮಾಡುವದು ಬೇಡ ಎಂದು ಕಂಠೋಕ್ತವಾಗಿ ಹೇಳಿದ್ದಾನಲ್ಲಾ!

ಹಿಂದು—ಉದಾಹರಣೆಗಳು ಸಾಕು, ದೇವರ ಅವತಾರವಾಗಿರುವವನು ಇಂಥಾ ಅವಿಚಾರದ ಅನ್ಯಾಯದ ಕೃತ್ಯಗಳನ್ನು ಸರ್ವಥಾ ಮಾಡುವವನಲ್ಲಾ. ಇಂಥಾ ಅಜ್ಞಾನವನ್ನು ಎಂದೂ ತಾಳುವವನಲ್ಲಾ.

ಉಪದೇಶಕ—ಯೇಸು ಕ್ರಿಸ್ತನ ವೃತ್ತಾಂತವು ಪೂರ್ಣ ಬೇರೆ. ನೀವು ಆತನ ಚರಿತ್ರವು ಅಡಗಿರುವ ಸುವಾರ್ತೆಗಳನ್ನು ಓದಿದರೆ, ಇಂಥಾ ಕೊರತೆಗಳು ಆತನಲ್ಲಿ ಎಳ್ಳಷ್ಟಾದರೂ ಕಾಣವು. ಯಾವ ತರದ ಪಾಪವನ್ನೂ ಮಾಡುವದಕ್ಕೆ ಆತನು ಅಪ್ಪಣೆಯಾಗಲಿ ಸ್ವತಂತ್ರವಾಗಲಿ ಕೊಡಲಿಲ್ಲಾ. ತನ್ನ ಸಹೋದರನ ಮೇಲೆ ವಿನಾಕಾರಣವಾಗಿ ಕೋಪ ಮಾಡುವವನು ಕೊಲೆಗಾರನಾಗುತ್ತಾನೆಂದೂ ಪರಸ್ತ್ರೀಯನ್ನು ಕಾಮದೃಷ್ಟಿಯಿಂದ ನಿರೀಕ್ಷೆ ಮಾಡುವವನು ವ್ಯಭಿಚಾರಿಯಾಗುತ್ತಾನೆಂದೂ ಹೇಳಿದ್ದಾನೆ. ಆತನು ಬುದ್ಧಿಶೂನ್ಯತೆಯಿಂದ ಇಲ್ಲವೆ ಅವಿಚಾರದಿಂದ ಎಂದೂ ಏನೂ ಮಾಡಿದವನಲ್ಲಾ. ಅನ್ಯಾಯದ ಭಾವನೆಯಾಗಲಿ ಕಲ್ಪನೆಯಾಗಲಿ ಆತನಲ್ಲರಲಿಲ್ಲಾ. ಆತನು ಜೀವಮಾನವೆಲ್ಲವನ್ನು ದೇವರ ಮಹಿಮೆಯಲ್ಲಿ ಪರಾರ್ಥಚಿಂತನೆಯಲ್ಲಿ ಕಳೆದವನಾದನು. ಇಂಥಾ ನಿಷ್ಕಳಂಕ ಪರಿಶುದ್ಧ ಯೇಸು ಕ್ರಿಸ್ತನು ದೇವರ ಅವತಾರವಾಗಿದ್ದನೆಂಬದು ಸ್ವತಸ್ಸಿದ್ಧವಾಗುತ್ತದೆ. ಆತನೇ ಮನುಷ್ಯನ ಸತ್ಯಗುರು, ಉದ್ಧಾರಕನು; ತನ್ನಲ್ಲಿ ವಿಶ್ವಾಸವಿಡುವವರನ್ನು ಸಂಪೂರ್ಣವಾಗಿ ರಕ್ಷಿಸುವವನು, ಪರಲೋಕದ ಸೌಭಾಗ್ಯವನ್ನು ಕೊಡಿಸುವವನು. ಮನುಷ್ಯರು ಕಲ್ಪಿಸಿಕೊಂಡ ಗುರುಗಳನ್ನೂ ಉದ್ಧಾರಕರನ್ನೂ ಬಿಟ್ಟು ಬಿಟ್ಟು ನಿಜರಕ್ಷಕನಾದ ಯೇಸು ಕ್ರಿಸ್ತನ ಶರಣಕ್ಕೆ ಬನ್ನಿರಿ; ನಿಮಗೆ ರಕ್ಷಣ್ಯ ದೊರಕುವದು.

ಹಿಂದು—ನೀವು ಹೇಳಿದ್ದು ವಾಸ್ತವ್ಯವಾಗಿ ತೋರುತ್ತದೆ. ನಾನು ಇದನ್ನು ಕುರಿತು ಇನ್ನೂ ಆಲೋಚನೆ ಮಾಡುವೆನು. ಬರುತ್ತೇನೆ, ಸಲಾಂ.

ಠಸೇತೀವೆ೯.

(೧೮೮೯ನೇ ಇಸವಿ Iನೇ ಆಕ್ಟಿನಲ್ಲಿರುವ ಪಟ್ಟಿಯಿಂದ ಎತ್ತಿ ತೆಗದು ಸಂಕ್ಷೇಪಿಸಿದ್ದು.)

ದಸ್ತಾವೇಜಿನ ವಿವರಣೆ:	ಸ್ಟಾಂಪ್ ಹಾಸಲು:

11. (Bill of Exchange or Promissory Note) ಬಿಲ್ ಒಫ್ ಎಕ್ಸ್‌ಚೇಂಜ್ ಯಾ ಪ್ರೊಮಿಸರಿ ನೋಟು (ಅಂದರೆ ವಟಾಯಿಸ ತಕ್ಕ ಪತ್ರ, ಇದರಲ್ಲಿ ಚಕ್ಕ್, ದಸ್ತಾವೇಜು, ಬೇಂಕನೋಟು, ಇಲ್ಲವೆ ಕರೆನ್ಸಿನೋಟು ಶೇರುವದಿಲ್ಲ):—

